ವಾರ್ಷಿಕ ಚಂದಾ ರೂ. ೩ ಬಿಡಿಪ್ರತಿ ೪ ಆಣೆ.

ಆಯುರ್ವೇದ

ಕನ್ನಡ ಮಾಸಪತ್ರಿಕೆ, ಉಡುಪಿ. ದ. ಕ.

ಸಂಪುಟ ೧] March ಸರ್ವಧಾರಿ ಸಂ। ಫಾಲ್ಗುಣ ಮಾಸ 1949 [ಸಂಚಿಕೆ ೬

AYURVEDA



ದೇಶೀಯ ಸಂಸ್ಕೃತಿಯ
ಹಿರಿಮೆಗಾಗಿ
ಹಗಲಿರುಳು ದುಡಿದ
ವಿಭೂತಿ ಪುರುಷ
ಬಾಪೂಜೀ--

ವಿಷಯ ಸೂಚಿ —

KANNADA MONTHLY, UDIPI. S. K.

ಮುದ್ರಕರು:
ಶ್ರೀ ರಾಧಾಕಾಂತ ಪ್ರೆಸ್,
ಮೂಲ್ಕಿ, ದ. ಕ.

ಆಯುರ್ವೇದ

ಕನ್ನಡ ಮಾಸಪತ್ರಿಕೆ.

ಪ್ರಕಾಶಕರು
ಕಾ. ರಾ. ಪುರಾಣಿಕ,
ಆಯುರ್ವೇದ ಆಲಯ,
ಉಡುಪಿ, ದ. ಕನ್ನಡ.

ಸಂಪಾದಕ ಮಂಡಳಿಯವರು.

ಪುಸ್ತಕ ವಿಮರ್ಶೆ.

ಸಚಿತ್ರ ಇಂಜಕ್ಷನ್ ವಿಜ್ಞಾನಶಾಸ್ತ್ರ ಅಥವಾ ಸೂಚಿಕಾಭರಣವಿದ್ಯೆ:—

ಬರೆದವರು:— **ವೈದ್ಯಶಿರೋಮಣಿ ಪಾಂಡುರಂಗ ತವನ್ಮಾಜಿ ಕುಲಕರ್ಣಿ, ಮೆಣಸಿಗಿ.**

ಇವರು ಕನ್ನಡ ವೈದ್ಯಕ ಸಾಹಿತ್ಯದಲ್ಲಿ ಹೊಸದೊಂದು ಹೆಜ್ಜೆಯನ್ನು ಪ್ರಥಮವಾಗಿ ಇಟ್ಟು ಈಗಿನ ವಾತಾವರಣಕ್ಕೆ ಬೇಕಾಗುವ ಹಳೆ ಪದ್ಧತಿಯ ತುಲನಾ ಸಹಿತ ಈಗಿನ ಪದ್ಧತಿಗೆ ತರ್ಜುಮೆ ಪಡೆದು ನಾಡಿನ ವೈದ್ಯರಿಗೂ ಸಾಹಿತ್ಯಕ್ಕೂ ಸೇವೆ ಸಲ್ಲಿಸಿರುವುದು ಅಭಿನಂದನೀಯ.

ಕಾಲಮಾನಕ್ಕೆ ತಕ್ಕಂತೆ ಬೇಕಾಗುವ ಈ ಪುಸ್ತಕವನ್ನು ವಿವರವಾಗಿ ಪ್ರಕಟಿಸಿ ಈ ಸಂಬಂಧಪಡುವ ವೈದ್ಯಬಂಧುಗಳಿಗೆ ತುಂಬ ಸಹಾಯವನ್ನು ಮಾಡಿರುವರು. ಮುಂದಿನ ಹೆಜ್ಜೆಗಳಿಗೆ ಲೇಖಕರಿಗೆ ಪ್ರೋತ್ಸಾಹಿಸಿ ಹೊಸಹೊಸ ಹೆಜ್ಜೆಗಳನ್ನು ಆದರ್ಶರೂಪವಾಗಿ ಇತರರೂ ಇಟ್ಟು ಕನ್ನಡ ವೈದ್ಯಕದಲ್ಲಿಯ ಕುಂದನ್ನು ನಿವಾರಿಸಬೇಕೆಂದು ಆಶಿಸುತ್ತೇವೆ.

ಐಚ್ಛಿಕ ಸಂತಾನ ಅಥವಾ ಗಂಡು ಹೆಣ್ಣಿನ ಹುಟ್ಟು.

ಸಂಗ್ರಾಹಕರು:— **ಈ ಮೇಲಿನವರೇ.**

ಇದರಲ್ಲಿ ಮುನ್ನುಡಿಕಾರರು ಹೇಳಿದಂತೆ "ಇದು ವಿಶ್ವದಲ್ಲಿಯೇ ಗಣ್ಯಸ್ಥಾನ ಪಡೆದಿರುವ ಮಹಾ ಶಾಸ್ತ್ರ. ಆಯುರ್ವೇದದಲ್ಲಿಯಂತೂ ಇದಕ್ಕೆ ಅಗ್ರಸ್ಥಾನವಿದೆ" ಅಂದಬಳಿಕ ಇದನ್ನು ಈಗಿನ ಶಾಂಕಿಕ ವಿಜ್ಞಾನಗಳ ಆಧಾರಗಳಿಂದಲೂ ಅಶಾಂಕಿಕ ಶಾಸ್ತ್ರಗಳ ಆಧಾರಗಳಿಂದಲೂ ಸಂಗ್ರಾಹಕರ ಸೂಕ್ತ ವಿಷಯಗಳನ್ನು ಸಂಗ್ರಹಿಸಿ ವಿವರಿಸಿರುವರು. ಲೈಂಗಿಕ ವಿಚಾರವಾಗಿ ಕನ್ನಡದಲ್ಲಿ ಶ್ರೀ ಗೋಪಾಲಕೃಷ್ಣರಾಯರು, ಶ್ರೀ ಭಾರದ್ವಾಜರು, ಶ್ರೀ ವಿನಾಯಕ ಭಾಪಟರಾದಿ ಕೆಲವೇ ಜನ ಸೇವೆ ಸಲ್ಲಿಸುತ್ತಿದ್ದರೂ ಈ ಭಾಗದಲ್ಲಿ ಕೊರತೆಇತ್ತು. ಈ ಸಂಗ್ರಾಹಕರೂ ಮುಂದುವರಿದುದು ಸಂತೋಷಕರ. ಇಂಥಾ ಸಂಗ್ರಹಗಳು ಇನ್ನು ಯೋಗ್ಯರೀತಿಯಲ್ಲಿ ಇನ್ನೂ ಹೆಚ್ಚಾಗಿ ಜನತೆಗೆ ದೊರೆತು ಪರಿಜ್ಞಾನ ಸಿಗಲೆಂದೂ ಅದರಿಂದ ಎಲ್ಲರಿಗೂ ಉಪಕಾರವಾಗಲೆಂದೂ ಹಾರೈಸುತ್ತೇವೆ.

ಅನುಭೂತ ಯೋಗ ಸಂಗ್ರಹ

ಸಂಗ್ರಾಹಕರು:— **ಗ. ಸಿ. ಪಟವರ್ಧನ, ಆಯುರ್ವೇದ ತೀರ್ಥ, ಶಿರಸಿ.**

ಇದು ಒಂದು ಶ್ಲಾಘ್ಯಕಾರ್ಯ. ಇದರಲ್ಲಿ ನಮ್ಮ ಕರ್ಣಾಟಕದ ಸುತ್ತುಮುತ್ತಲ ಪ್ರದೇಶದಲ್ಲಿ ಸುಲಭವಾಗಿ ದೊರಕುವ ಮೂಲಿಕೆಗಳು, ಕರ್ಣಾಟಕ ವೈದ್ಯರಲ್ಲಿ ಅಧಿಕವಾಗಿ ಬಳಕೆಯುಲ್ಲಿರುವ ಪ್ರಯೋಗಗಳನ್ನು ಪ್ರಕಟಿಸಿ ವೈದ್ಯ ಮತ್ತು ರೋಗಿ ವೃಂದಕ್ಕೆ ಬಹಳ ಉಪಕಾರಮಾಡಿದ್ದಾರೆ. ಅದರಲ್ಲೂ ವನಸ್ಪತಿ ಪ್ರಕರಣದಿಂದ ಬಡರೋಗಿಗಳಿಗೆ

ಅನೇಕ ಪರಿಣಾಮಕಾರೀ ಚಿಕಿತ್ಸೆ ಸುಲಭದಲ್ಲಿ ರಿಕ್ತ ಸ್ಥಿತಿಯಲ್ಲಿ ದುಬಾರಿ ಹಣಕೊಡದ ಲಾಗದೆ ನರಳಬೇಕಾದ ಪ್ರಸಂಗವಿಲ್ಲದಂತೆ ಮಾಡಿದ್ದಾರೆ. ಮೇಲಾಗಿ ಈಗಿನ ಸ್ಥಿತಿಯಲ್ಲಿ ನಮ್ಮ ಮನೆಸುತ್ತುಮುತ್ತಿನ ಅರಿವಿಲ್ಲದೆ ಪಾಶ್ಚಾತ್ಯದೇಶ ಎಂಬ ಅಂತರಿಕ್ಷವನ್ನು ನೋಡಿಕೊಂಡು ಮಂಕು ಹಿಡಿದುಕೊಂಡುವ ನಮ್ಮಲ್ಲಿನ ಅನೇಕರನ್ನು ಎಚ್ಚರಗೊಳಿಸಿ ದೇಶೀಯ ಮೂಲಿಕೆಗಳ ಉಪಯೋಗವನ್ನು ಸುಲಭದಲ್ಲಿ ಹೊಂದುವಂತೆ ಮಾಡಿದ್ದಾರೆ.

ಭಸ್ಮ ಪ್ರಕರಣದಲ್ಲಿ ಮಾತ್ರ ಔಷಧಿ ಪ್ರಮಾಣವನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕು.

ಸಾದರ ಸ್ವೀಕಾರ

ವೇದ ಸಂದೇಶ:— ಬೆಂಗಳೂರಿನಿಂದ ಹೊರಡುತ್ತಿರುವ ಕನ್ನಡ ಮಾಸಪತ್ರಿಕೆ. ಸಂಪಾದಕರು:- ಶ್ರೀ ಪಂಡಿತ್ ಸುಧಾಕರಜೀ, ಆಯುರ್ಸೇವಕ ಮತ್ತು ಶ್ರೀ ಪಂಡಿತ್ ಮಂಜುನಾಥಜೀ ಶಾಸ್ತ್ರಿ. ಸಿದ್ಧಾಂತಭೂಷಣ ಸಾಹಿತ್ಯರತ್ನ. ವಾರ್ಷಿಕ ಚಂದಾ ರೂ. ೪-೦-೦ ಬಿಡಿ ಪ್ರತಿ ೦-೪-೦

ಶ್ರೀ ಕೃಷ್ಣ ಸಂದೇಶ:— ಮದ್ರಾಸಿನಿಂದ ಹೊರಡುತ್ತಿರುವ ಕನ್ನಡ ಮಾಸಪತ್ರಿಕೆ. ಸಂಪಾದಕರು ಮತ್ತು ಪ್ರಕಾಶಕರು:- ಮುದ್ರಾಡಿ ಜನಾರ್ಧನ ಆಚಾರ್ಯ. ಶಿರೋಮಣಿ. ವಾರ್ಷಿಕ ಚಂದಾ ರೂ. ೨-೮-೦. ಬಿಡಿ ಪ್ರತಿ ೦-೪-೦.

ಆಯುರ್ವೈದ್ಯ:— ಹುಬ್ಬಳ್ಳಿಯಿಂದ ವೈದ್ಯಗುರು ಡಾ. ಅ. ಪಂಸಿಕರರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಕನ್ನಡ ವೈದ್ಯಕ ಮಾಸಪತ್ರಿಕೆ. ವಾರ್ಷಿಕ ಚಂದಾ ರೂ. ೪-೦-೦

THE JOURNAL OF AYURVEDA:— ನವದೇಹಲಿಯಿಂದ ಆಂಗ್ಲ ಭಾಷೆಯಲ್ಲಿ ಹೊರಡುತ್ತಿರುವ ವೈದ್ಯಕ ಮಾಸಪತ್ರಿಕೆ. ಪ್ರಧಾನ ಸಂಪಾದಕರು:— ಡಾ| ಸಿ. ದ್ವಾರಕಾನಾಥ L I·M·(Mad.) Z·T· (Hamburg Varsity) ಮೆನೇಜಿಂಗ್ ಸಂಪಾದಕರು;— ಕವಿರಾಜ ಎ. ಮುಜುಮುದಾರ್ M·R A·S· (London) F I·A.M· ಬಿಷಗಾಚಾರ್ಯ. ಸುಪರವ್ಯಾಜಿಂಗ್ ಸಂಪಾದಕರು:— ಕವಿರಾಜ ಗುರುದತ್ತ Msc· ವೈದ್ಯಭಾಸ್ಕರ, ಮತ್ತು ಹತ್ತುಜನ ಸಂಪಾದಕ ಮಂಡಳಿಯಿಂದೊಡಗೂಡಿರುವುದು. ವಾರ್ಷಿಕ ಚಂದಾ ರೂ. ೭-೮-೦. ಬಿಡಿಪ್ರತಿ ೦-೧೨-೦

ನವಯುಗ:- ಉಡುಪಿಯಿಂದ ಹೊರಡುತ್ತಿರುವ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಸಂಪಾದಕರು ಮತ್ತು ಪ್ರಕಾಶಕರು:- ಶ್ರೀ ಕೆ. ಹೊನ್ನಯ್ಯ ಶೆಟ್ಟಿ. ವಾರ್ಷಿಕ ಚಂದಾ ರೂ. ೫—೪—೦. ಬಿಡಿ ಪ್ರತಿ ೦—೨—೦.

ವಾರ್ತಾ ವಿಹಾರ

೧ ಮುಂಬಯಿ ಪ್ರಾಂತದಲ್ಲಿ ರಿಜಿಸ್ಟ್ರೇಶನ್ ಆಗಬಯಸುವ ವೈದ್ಯಬಂಧುಗಳು ೧೯೪೧ರಲ್ಲಿ ರಿಜಿಸ್ಟ್ರೇಶನ್ ಆಗದೆ ಉಳಿದುದರ ಕಾರಣಗಳೊಂದಿಗೆ ತಮ್ಮ ಶಿಕ್ಷಣ, ವಯಸ್ಸು, ಅನುಭವ, ವಿಳಾಸ ವಗೈರೆ ಎಲ್ಲಾ ಮಾಹಿತಿಗಳೊಂದಿಗೆ ಮುಂಬಯಿ ಇಲಾಖೆಯ

ವೈದ್ಯಕ ಬೋರ್ಡಿನ ಸಭಾಸದರಾದ "ಶ್ರೀಮಾನ್ ವೈದ್ಯಶಾಸ್ತ್ರಿ ಬಿಂದುಮಾಧವ ಪಂಡಿತ, ಶ್ರೀ ರಾಮವಾಡಿ ಆಯುರ್ವೇದ ಸೇವಾ ಸಂಘ, ನಾಸಿಕ" ಇವರು ತಮ್ಮ ಕಡೆಗೆ ಪತ್ರವ್ಯವಹಾರ ಮಾಡಬೇಕೆಂದು ಪ್ರಕಟಿಸಿದ್ದಾರೆ. ಹಾಗೂ ನಿ. ಕ. ಆ. ಮಂಡಳದ ಅಧ್ಯಕ್ಷರಾದ ವೈದ್ಯಗುರು ದಾ. ಅ. ಹಲಸೀಕರರೂ ೧೮೫೦ ಅತ್ರೇಯ ಸದ ಹುಬ್ಬಳ್ಳಿ ಇವರ ಕಡೆಗೂ ಮನವಿಯನ್ನು ಸಲ್ಲಿಸಿದಲ್ಲಿ ಸಂಘಟನೆಯಿಂದ ಕಾರ್ಯ ತತ್ಪರರಾಗಬಹುದೆಂದು ಆಶಿಸುತ್ತೇವೆ.

೨ ಬೆಂಗಳೂರು ನಗರ ಹಾಗೂ ಸುತ್ತುಮುತ್ತಲಿನ ಗ್ರಾಮಾಂತರದಲ್ಲಿ ವಾಸಿಸುವ ಬಡ ಜನರಿಗೆ ಹೆಚ್ಚೆಚ್ಚು ವೈದ್ಯಕೀಯ ಸಹಾಯ ಒದಗಿಸುವ ಬಗ್ಗೆ ಮೈಸೂರು ಸರಕಾರದವರು ಸಂಚಾಲಕ ವೈದ್ಯಶಾಲೆಗಳಿಗಾಗಿ ಈಗಾಗಲೇ ವಾಹನಗಳನ್ನು ತರಿಸಿದ್ದು ಬೇಗನೇ ಈ ಯೋಜನೆಯು ಜ್ಯಾರಿಗೆ ಬರಲಿದೆ. ಆದರೆ ಆಯುರ್ವೇದ ವೈದ್ಯರಿಗೆ ಇಂಥಾ ಸವಲತ್ತುಗಳನ್ನು ಒದಗಿಸದೆ ಸಂಪೂರ್ಣವಾಗಿ ಪಾಶ್ಚಿಮಾತ್ಯ ವೈದ್ಯಕದ ಬೆನ್ನು ಹತ್ತಿದ್ದು ವಿಷಾದವೂ ಕನಿಕರವೂ ಇರುವುದು.

ದೇಶೀಯ ಸರಕಾರವು ದೇಶೀಯ ಸಂಸ್ಕೃತಿಯ ಹಿರಿಮೆಗಾಗಿ ದೇಶೀಯ ವೈದ್ಯರಿಗೂ ಸ್ವಲ್ಪ ಮಟ್ಟಿನದಾದರೂ ಅನುಕೂಲತೆಗಳನ್ನು ಒದಗಿಸಿಕೊಟ್ಟು ಸ್ವಾಭಿಮಾನವನ್ನು ಇನ್ನಾದರೂ ಕಲಿಯಬೇಕೆಂದು ಸೂಚಿಸುತ್ತೇವೆ

೩ ದೇಶೀಯ ವೈದ್ಯ ಇಲಾಖೆಯ ಪುನರ್ವ್ಯವಸ್ಥೆಗಾಗಿ ನೇಮಿಸಲ್ಪಟ್ಟ ಸ್ಪೆಶಲ್ ಆಫೀಸರರು ದೇಶೀಯ ಔಷಧದಲ್ಲಿ ಸಂಶೋಧನೆ ನಡೆಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಸರಕಾರಕ್ಕೆ ಒಪ್ಪಿಸಲಾಗಿ ಸರಕಾರವು ಮಂಜೂರುಮಾಡಿರುತ್ತದೆ. ದೇಶೀಯ ಔಷಧಗಳನ್ನು ವೃದ್ಧಿಗೊಳಿಸುವ ಏರ್ಪಾಡುಗಳಲ್ಲಿ ಸರಕಾರವು ಒಂದು ಆಯುರ್ವೇದ ಕಲಾಶಾಲೆ(ಇಂಡಿಯನ್ ಮೆಡಿಕಲ್ ಕೊಲೇಜ) ಯನ್ನು ಆರಂಭಿಸಿದೆ. ಈಗಿರುವ ದೇಶೀಯ ವೈದ್ಯಶಾಲೆಗಳನ್ನು ಮುಂದುವರಿಸಲಿಕ್ಕೂ ನಿಶ್ಚಯಿಸಿ ಸಂಶೋಧನಾ ಶಾಖೆಯನ್ನು ತೆರೆಯುವ ವಿಷಯವನ್ನು ಪರ್ಯಾಲೋಚಿಸುತ್ತಲಿದೆ.

ಸುಶ್ರುತಾಚಾರ್ಯರೇ ಮೊದಲನೇ ನೇತ್ರ ಚಿಕಿತ್ಸಕರು
(EYE SURGEON)



DR. M. C. MODI, Eye Surgeon

ವಿಶ್ವಾಮಿತ್ರ ಮಹಾಮುನಿಗಳ ಮಗನಾದ ನೇತ್ರ ಚಿಕಿತ್ಸೆಯಲ್ಲಿ ಶಸ್ತ್ರಕರ್ಮವನ್ನು ಪ್ರಥಮತಃ ಪ್ರಾರಂಭಿಸಿದ "ಸುಶ್ರುತಾಚಾರ್ಯ"ರು ತಮ್ಮ ನೈಪುಣ್ಯವನ್ನು ಶಿಷ್ಯವರ್ಗಕ್ಕೆ ಹೇಳಿಕೊಟ್ಟದ್ದು ಆಯುರ್ವೇದದ ಪ್ರಗತಿ, ಕೌಶಲ್ಯಗಳಿಗೆ ತುಂಬಾ ಹಿರಿಮೆಯನ್ನೂ ಕೀರ್ತಿಯನ್ನೂ ಕಟ್ಟಿಟ್ಟಿರುವರು.

ಪಾಶ್ಚಿಮಾತ್ಯ ವೈದ್ಯ ವಿದ್ಯಾ ಪಟುಗಳಾದ ವಿಲ್ಸನ್, ಮುಲ್ಲರ ಮೊದಲಾದವರು ಭರತ ಖಂಡವೇ ವೈದ್ಯಕೀಯ ಶಾಸ್ತ್ರದ ಜನ್ಮಭೂಮಿ ಎಂಬುದನ್ನು ಘೋಷಿಸಿರುವರು. ಹೆಚ್ಚಿನ ಪಾಶ್ಚಾತ್ಯ ವೈದ್ಯ ವಿಚಾರದವರು 'ಆಯುರ್ವೇದವು ತಮ್ಮ ವೈದ್ಯ ವಿಜ್ಞಾನಕ್ಕೆ ತುಂಬಾ ಪೋಷಕವಾಗಿರುವದೆಂಬುದನ್ನು' ಬರೆದು ಪ್ರಕಟಿಸಿರುವರು.

ಸುಶ್ರುತಾಚಾರ್ಯರು ಹಲವು ಶಾಸ್ತ್ರೀಯ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಅರೆಬ್ಬಿ, ಲ್ಯಾಟಿನ್, ಜರ್ಮನ್ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿವೆ. ನೇತ್ರ ಶಸ್ತ್ರ ಚಿಕಿತ್ಸಾ ವಿಚಾರ ಬಹಳ ವಿಶಾಲವಾಗಿ "ಸುಶ್ರುತ ಸಂಹಿತೆ" ಉತ್ತರ ತಂತ್ರವೆಂಬ ವಿಭಾಗದಲ್ಲಿ ಅಧ್ಯಾಯ ೧ರಿಂದ ೧೯ರ ವರೇಗೆ ಚನ್ನಾಗಿ ವಿವೇಚಿಸಿದ್ದಾರೆ. ಅಭಿಷ್ಯಂದ (Conjunctive) ಶ್ವೇತಮಂಡಲ (Sclera) ಪಾರದರ್ಶಕ ಮಂಡಲ (Cornea) ನೇತ್ರಮಣಿ (Lens) ದೃಷ್ಟಿಪಟಲ (Retina) ಲಿಂಗನಾಶ (Glaucoma) ಇತ್ಯಾದಿ ಹಲವು ನೇತ್ರ ರೋಗಗಳನ್ನು ವಿವರವಾಗಿ ವರ್ಣಿಸಿ ಚಿಕಿತ್ಸೆಯನ್ನು ಕೂಡಾ ಹೇಳಿದ್ದಾರೆ ಕಣ್ಣಿನ ಪರೆ (Catract)ಯ ಶಸ್ತ್ರ ಚಿಕಿತ್ಸೆಯಲ್ಲಿ ಐತಿಹಾಸಿಕ ಕೀರ್ತಿಯನ್ನು ಮೊದಲನೇಯವರಾಗಿ ತರತರದ ಚಿಕಿತ್ಸಾ ವಿಧಾನಗಳಿಂದ ಪಡೆದಿರುವರು. ಇವರ ಅರ್ಮ Pterygius (Arma) ದಲ್ಲಿಯ ಶಸ್ತ್ರ ಚಿಕಿತ್ಸೆಯ ಶಾಸ್ತ್ರೀಯ ರೀತಿಯುಂದದು ಆಧುನಿಕ ಚಿಕಿತ್ಸಾಕಾರರನ್ನು ಮೀರಿಸುವಂತಿದೆ. ಪಕ್ಷ್ಮಕೋಪಾ (Trichiasis) ಎಂಬ ನೇತ್ರ ರೋಗದ ಶಸ್ತ್ರ ಚಿಕಿತ್ಸೆಯನ್ನು ಈಗಿನ ಪಾಶ್ಚಾತ್ಯ ಶಸ್ತ್ರ ಕ್ರಿಯೆಗೆ ಸರಿಹೋಲಿಸಬಹುದು. ಅಧಿಮಂಥ ಮೊದಲಾದ ನೇತ್ರರೋಗಗಳ ಸಾಧ್ಯಾಸಾಧ್ಯತೆಯ ವಿವೇಚನೆಯನ್ನು ಸಾವಿರಾರು ವರ್ಷಗಳ ಹಿಂದೆ ಅವರು ಬರೆದಿಟ್ಟದನ್ನು ಇಂದಿಗೂ ಬದಲಿಸದೆ ಅದೇ ಕ್ರಮದಲ್ಲಿ ಈಗಲೂ ಮಾಡಬಹುದು. ಅಲ್ಲದೆ ಇಂದಿಗೂ ಮಾಡುವರು. ಇಂದಿನ ನೇತ್ರ ಚಿಕಿತ್ಸಕರು "ಸುಶ್ರುತ"ದಿಂದ ತುಂಬಾ ತಿಳಿಯತಕ್ಕ ಅಂಶಗಳಿವೆ.

ಉದಾಹರಣೆಗಾಗಿ:- ಮೊಲೆಹಾಲು. ಇದು ಶಾಮಕ, ಸ್ಥಂಬಕ ಮತ್ತು ಪೋಷಕ ಗುಣಗಳುಳ್ಳದ್ದಾಗಿದ್ದು ನೇತ್ರ ಚಿಕಿತ್ಸೆಯಲ್ಲಿ ಇದರ ಪ್ರಯೋಗವನ್ನು ಪ್ರಥಮವಾಗಿ ವಿವೇಚಿಸಿರುವರು. ಅಲ್ಲದೆ ಪಟ್ಟಿ (Bandages) ಮತ್ತು ಹೊಲಿಯುವ (Suturing) ಕೂಡಾ ವಿವೇಚಿಸಿದ್ದಾರೆ. ಇವರ ನೇತ್ರ ಚಿಕಿತ್ಸೆಯ ನಾನಾ ವಿಧದ ಕರ್ಮಗಳನ್ನು (ಉದಾ:- ಲೇಖನ, ಭೇದನ, ಛೇದನ, ವ್ಯಾಧನ, ಮೊದಲಾದ) ಇಂದಿನ ಯಾವತ್ತೂ ಪಾಶ್ಚಾತ್ಯ ಶಸ್ತ್ರಕರ್ಮಕ್ಕೆ ಸರಿಸಮಾನವಾದವುಗಳೆಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು.

ಸುಶ್ರುತಾಚಾರ್ಯರು ನೇತ್ರ ರಚನೆಯ ಬಗ್ಗೆ ವಿವೇಚಿಸಿದ ವಿಭಾಗಗಳು:- 1. ನಯನ ಭುದ್ಧ (Eye ball) 2 ಪಕ್ಷ್ಮ ಮಂಡಲ (Circle of eye lash) ವರ್ತ್ಮ ಮಂಡಲ (Circle of eye lids) ಸ್ವೇತ ಮಂಡಲ (Sclerotic region) ಕೃಷ್ಣ ಮಂಡಲ (Cornea)

ಇನ್ನು ನೇತ್ರ ರೋಗಗಳನ್ನು ಈ ರೀತಿಯಾಗಿ ವಿವೇಚಿಸಿದ್ದಾರೆ:-

1. ಅಭಿಷ್ಯಂದ (Conjunctivatis) 2 ಶುಷ್ಕಾಕ್ಷಿಪಾಕ (Ophthalmo-plegia) 3 ಶಿರೋತ್ಪಾದ (Catrrhal conjunctivatis) 4 ಸವ್ರಣಶುಕ್ರ (Keratisis) 5 ಅವ್ರಣಶುಕ್ರ (Corneal opacity) 6 ಅಕ್ಷಿಪಾಕಾತ್ಯ (Hypopion) 7 ಅಜಕಾಜಾತ (Ant. Staphiloma) 8 ಪಕ್ಷ್ಮಕೋಪ (Techiasis) 9 ಪಕ್ಷ್ಮಶಾಣ (Blepharitis) 10 ಪೋಥಕಿ (Trachoma) 11 ಅಂಜನ (Stye) 12 ಲಗಣ (Myb Cyst) 13 ನೇತ್ರಪಾಕ (Phthisis bulbi) 14 ಸಿರಾಜಾಲ (Panas) 15 ಸಿರಾಪಿಡಿಕಾ (Sclerisis) 16 ಶುಕ್ತಿಕ (Xerosis) 17 ಅರ್ಜುನ (Phlyet Conjunctions) 18 ಲಿಂಗನಾಶ (Glauccma) 19 ಅನಿಮಿತಲಿಂಗನಾಶ (Catnact) 20 Optic atrophy.

ಸುಶ್ರುತಾಚಾರ್ಯರು ವಿವರಿಸಿದ ನೇತ್ರ ರೋಗಗಳ ಸಾಧ್ಯಾಸಾಧ್ಯತೆಯ ವಿವೇಚನೆಗಳ ಬಗ್ಗೆ ಇಂದಿಗೂ ಅದೇ ಅಭಿಪ್ರಾಯವನ್ನು ಅನುಮೋದಿಸಬಹುದು. ಉದಾ:- ಅನಿಮಿತ ಲಿಂಗನಾಶ (Atrophy of optic) Nerve ಗಂಭೀರಿಕಾ, ಧೂಮಅಕ್ಷಿ (Blaucoma) ಗಳಾಗಿರುವವು. ಅವುಗಳನ್ನು ಗುಣಪಡಿಸುವದು ಕಷ್ಟತಮ ಎಂಬುದನ್ನು ಈಗಿನವರು ಸಹಾ ಅನುಮೋದಿಸುತ್ತಾರೆ.

ಈಗಿನ ಆಧುನಿಕ ನೇತ್ರ ಚಿಕಿತ್ಸಕರು ಸುಶ್ರುತಾಚಾರ್ಯರು ವಿವೇಚಿಸಿದ ಯಕೃತಿನ ಉಪಯೋಗವನ್ನು ರಾತ್ರಾಂಧತ್ವಕ್ಕೆ ಮೈಲುತುತ್ತಿನ ಉಪಯೋಗ ಹೇಳಿದ್ದನ್ನು ಕಂಡು ಆಶ್ಚರ್ಯಪಡಬಹುದು. ಜೀವನದ ಬೆಳವಣಿಗೆಗೆ ಜೀವನ ಸತ್ವಗಳೇ (Vitamins) ಅತ್ಯಾವಶ್ಯಕ ಎಂಬ ವಿಚಾರ ಅವರಿಗೆ ಮೊದಲೇ ತಿಳಿದಿತ್ತು ಯಾಕೆಂದರೆ ಅವರ ಚಿಕಿತ್ಸಾ ಕ್ರಮದಲ್ಲಿ ಧಾರಾಳವಾಗಿ ಮಜ್ಜಿಗೆ, ತುಪ್ಪ, ಹಾಲು ಜೀವನ ಸತ್ವಗಳಿಂದ ಕೂಡಿದ ಹಣ್ಣುಹಂಪಲು ಇತ್ಯಾದಿ ವಸ್ತುಗಳನ್ನು ಉಪಯೋಗಿಸಬೇಕಾಗಿ ರೋಗಿಗಳಿಗೆ ಅನುಪಾನ ಸೂಚಿಸಿರುವರು.

(ಐದನೇ ಪುಟಕ್ಕೆ ಮುಂದುವರಿಸಿದೆ.)

ಕ್ರಿಮಿನಾಶಕ ಮತ್ತು ಕಷಾಯಗುಣಗಳುಳ್ಳ ದ್ರವ್ಯಗಳಿಂದ ನೇತ್ರಗಳನ್ನು ತೊಳೆದು ಸ್ವಚ್ಛವಮಾಡುವ ಕ್ರಮವನ್ನು ಕೂಡಾ ಅವರು ಹೇಳಿರುವರು. ಇನ್ನೂ ಹಲವು ವಿಧದ ಕ್ರಮಗಳಾದ ಅಂಜನ (Ointments) ಧೂಮ್ರ (Vepors) ನಶ್ಯ (Snuff) ಕವಳ (Antiseptic gargles) ಇವುಗಳನ್ನು ಕೂಡಾ ಶಾಸ್ತ್ರೀಯವಾಗಿ ವರ್ಣಿಸಿದ್ದಾರೆ.

ಮೇಲೆ ಹೇಳಿದ ವಿಚಾರಗಳನ್ನು ಮನನಮಾಡಿದರೆ ಸುಶ್ರುತಾಚಾರ್ಯರ ಜ್ಞಾನಸಂಪತ್ತು ಕಾರ್ಯಕುಶಲತೆಗಳ ಬಗ್ಗೆ ತುಂಬಾ ಅಭಿಮಾನ, ಹೆಮ್ಮೆಪಡಬೇಕಾಗಿದೆ. ಸುಶ್ರುತಾಚಾರ್ಯರ ಈ ಅಂಶಗಳನ್ನು ಬಿಟ್ಟರೆ ನೇತ್ರ ಚಿಕಿತ್ಸೆಗೆ ದೊಡ್ಡ ಕುಂದು ಮತ್ತು ಅಪರಿಪೂರ್ಣವಾಗಿಯೇ ಉಳಿಯಬೇಕಾಗುವುದು. ಸಾವಿರಾರು ವರ್ಷಗಳ ಮೊದಲು ಹೇಳಿದ ಈ ಜ್ಞಾನಸಂಪತ್ತು ಇಂದಿಗೂ ಅಚ್ಚಳಿಯದೆ ಉಳಿದು ಹಿಂದಿನ ವೈಭವವನ್ನು ಇಂದಿಗೂ ಕೀರ್ತಿಯಿಂದ ಮೆರೆಸುವಂತಿದೆ. ಈ ಕೀರ್ತಿಯ ಮೊದಲಮಣೆ ಸುಶ್ರುತಾಚಾರ್ಯರಿಗೇ ಸಲ್ಲತಕ್ಕದ್ದು. ಇಂದಿನ ಪಾಶ್ಚಾತ್ಯ ನೇತ್ರ ಚಿಕಿತ್ಸಾ ನೈಪುಣ್ಯರಾದ ಫಕ್ಸ, ನೇಪ್, ಸ್ಮಿತ್, ಬಾರ್ಕ್ಲೈರ್, ರ್‍ಯಾಟ್ಸರೇ ಮೊದಲಾದವರು ಸುಶ್ರುತಾಚಾರ್ಯರ ಅನುಕರಣಿಕರು. ಅಂದ ಬಳಿಕ ಸುಶ್ರುತಾಚಾರ್ಯರ ಪಾಂಡಿತ್ಯ ಅವರ ಉದಾತ್ತ ಜೀವನ ಹಿಂದೀಯರಾದ ನಮಗೆ ಶಾಶ್ವತವಾದ ಕೀರ್ತಿಯೇ ಸರಿ.

ನೇತ್ರ ಚಿಕಿತ್ಸೆಯ ವಿಚಾರದಲ್ಲಿ ಸುಶ್ರುತಾಚಾರ್ಯರ ಹೆಸರು ಅಜರಾಮರವಾಗಿ ಬೆಳಗಲಿ.

ನೇತ್ರ ಶಾರೀರ ಪರಿಭಾಷಿಕ ಶಬ್ದಗಳು

1 ಶೀರ್ಷ (Skull)
2 ನೇತ್ರಕಪೋಲ (Orbit)
3 ಅಸ್ಥ್ಯಾವರಣ (Peiosteum)
4 ನೇತ್ರಗೋಲ (Eye ball)
5 ವರ್ತ್ಮಮಂಡಲ (Eye lid)
6 ಪಕ್ಷ್ಮಮಂಡಲ (Eye lashes)
7 ಅಶ್ರೋಪಾಕ (Lacrimal Apparatus)
8 ಅಶ್ರುಗ್ರಂಥಿ (Lacrimal gland)
9 ಅಶ್ರುನಲಿಕಾ (" Duct)
10 ಅಶ್ರುಛಿದ್ರ (Punctum)
11 ಅಶ್ರುಕೋಶ ಬಾಹ್ಯನಲಿತಾ (Canaliculus)
12 ಅಶ್ರುಕೋಶ (Eacimal sac)
13 ನಾಸಾಶ್ರುನಲಿತಾ (Naso lacrimal duct)
14 ಅಧೋನಾಸಾ ವಿವರ (Inferior me tus)
15 ನೇತ್ರಗೋಲಚ್ಛಾದನ (Tenon's capsule)
16 ನೇತ್ರಾಚ್ಛಾದಾವರಣ (conjunctivea)
17 ವರ್ತ್ಮಾಂತರಾವರಣ (Palpebral conjunctivea)
18 ಶ್ವೇತಮಂಡಲಾಚ್ಛಾದಾವರಣ (Pulber conjuctiva)

19 ಶ್ವೇತಮಂಡಲ (Sclera)
20 ಪಾರದರ್ಶಕ ಮಂಡಲ (Cornea)
21 ರುಧಿರಧಾರಿ ಪಟಲ (Chovois)
22 ದೃಷ್ಟಿ ಪಟಲ (Retina)
23 ವರ್ತರೇಖಾ (Ora Serrata)
24 ದೃಷ್ಟಿ ಮಜ್ಜಾ ತಂತು (Optia Nerve)
25 ಅಂಧಬಿಂದು (Optic disc)
26 ಪೀತ ಬಿಂದು (Maculallutea)
27 ರೂಪಕೇಂದ್ರ (Fovea centralis)
28 ಲೋಮಶ ಸ್ನಾಯು (Cilitery Muscle)
29 ಲೋಮಶಕಾಯ (Ciliary body)
30 ಲೋಮಶ ತಂತು (Ciliary process)
31 ವರ್ಣಮಂಡಲ (Iris)
32 ದೃಷ್ಟಿಮಂಡಲ (Pupil)
33 ದೃಷ್ಟಿಮಂಡಲಸಂಕೋಚಕ (Constrictor pulilae)
34 ದೃಷ್ಟಿಮಂಡಲ ವಿಕಾಸಕ (Dixlster pulilae)
35 ಪೂರ್ವಾಗಾರ (Anterior chamber)
36 ಪಶ್ಚಿಮಾಗಾರ (Posterior chamber)
37 ನೇತ್ರಮಣಿ (Lens)
38 ನೇತ್ರಮಣಿಕೋಶ (Lens capsule)
39 ಕಾಚರಸ (Vitreous)
40 ನೀರಧಾತು (Aqueous humour)
41 ಕಾಚರಸಾವರಣ (Hyaloid membrane)
42 ಸಂಧಿಬಂಧ (Suspensary ligament)
43 ವರ್ಣಪಾರದರ್ಶಕ ಕೋಣ (Iridocorneal angle)
44 ಶ್ವೇತಪಾರದರ್ಶಕಮಂಡಲ ಸಂಧಿ (Limbus)
45 ಅಪಾಂಗ (Leteral canthus)
46 ಕನೀನಿಕಾ (Medical canthus)
47 ಮಾಂಸಪಿಂಡ (Caruncula)
48 ತರುಣಾಸ್ಥಿ (Tarsus)
49 ಮೇದ (Fat)
50 ಪುರಃಕಪಾಲ (Frontal bone)
51 ಗಂಡಾಸ್ಥಿ (Zygomatic)
52 ಜತುಕಾಸ್ಥಿ (Sphenoid)
53 ಜಾಲಿಕಾಸ್ಥಿ (Ethmoid)
54 ತಾಲ್ವಸ್ಥಿ (Palatine)
55 ಅಶ್ರುಪಿಂಡಾಸ್ಥಿ (Lacrimal)
56 ನಾಸಾಸ್ಥಿ (Nasal)
57 ಊರ್ಧ್ವಹನ್ವಸ್ಥಿ (Maxilla)
58 ಊರ್ಧ್ವನೇತ್ರಕೋಟರ (Supra orbital fissure)
59 ಅಧೋನೇತ್ರಕೋಟರ (Infra orbital fissure)
60 ದೃಷ್ಟಿಮಜ್ಜಾತಂತುಛಿದ್ರ (Optic foramen)
61 ಅಶ್ರುಪಿ (Lacrimal fos)
62 ನೇತ್ರವರ್ತುಲಸ್ನಾಯು (Orbicularis oculi)
63 ವರ್ತ್ಮೋದ್ಧಾರಕ (Levator pulpebrae superiors)
64 ಊರ್ಧ್ವಋಜುಸ್ನಾಯು (Supeior rectus)

65 ಅಧೋಋಜುಸ್ನಾಯು (Inferior rectus)

66 ಬಾಹ್ಯಋಜುಸ್ನಾಯು (Lateral rectus)

67 ಅಂತರಋಜುಸ್ನಾಯು (Medical rectus)

68 ಊರ್ಧ್ವತಿರ್ಯಕ್ ಸ್ನಾಯು (Superior oblique)

69 ಅಧಸ್ತಿರ್ಯಕ್ ಸ್ನಾಯು (Inferior oblique)

70 ಅಂತರ್ಗ್ರೈವಯಕರೋಹಿಣಿ (Internal carotid artery)

71 ನೇತ್ರರೋಹಿಣಿ (Opthalmic artery)

72 ಪುರಃಕಪೋಲರೋಹಿಣಿ (Frontal artery)

73 ಪಶ್ಚಿಮನಾಸಾರೋಹಿಣಿ (Dorsal nasal artery)

74 ಅಶ್ರುರೋಹಿಣಿ (Lacrimal artery)

75 ಊರ್ಧ್ವನೇತ್ರಕೋಟರರೋಹಿಣಿ (Supra orbital artery)

76 ಪಶ್ಚಿಮಚಾಲನೀರೋಹಿಣಿ (Posterior Ethmoid artery)

77 ಪೂರ್ವಚಾಲರೋಹಿಣಿ (Anterior Ethmoid artery)

78 ಮಧ್ಯದೃಷ್ಟಿಪಟಲರೋಹಿಣಿ (Central retinal artery)

79 ಸ್ನಾಯುರೋಹಿಣಿ (Muscular artery)

80 ಹ್ರಸ್ವಪಶ್ಚಿಮಲೋಮಶರೋಹಿಣಿ (Short posterior ciliory artery)

81 ದೀರ್ಘಪಶ್ಚಿಮಲೋಮಶರೋಹಿಣಿ (Long posterior ciliory artery)

82 ಪೂರ್ವಲೋಮಶರೋಹಿಣಿ (Anterior ciliory artery)

83 ಮಧ್ಯನೇತ್ರಮಂಡಲರೋಹಿಣಿ (Medical Palpebral artery)

84 ಪೂರ್ವಮಸ್ತಿಕವರಣರೋಹಿಣಿ (Anterior meningeal artery)

85 ಕೇಶವಾಹಿನಿ (Capilaries)

86 ನೇತ್ರಮಜ್ಜಾತಂತು (Opthalmic nerve)

87 ಅಶ್ರುಮಜ್ಜಾತಂತು (Lacimal nerve)

88 ಪುರಃಕಪಾಲಮಜ್ಜಾತಂತು (Frontal nerve)

89 ನಾಸಾಲೋಮಶಮಜ್ಜಾತಂತು (Nesociliary nerve)

90 ದೀರ್ಘಲೋಮಶಮಜ್ಜಾತಂತು (Long cilitary nerve)

91 ಊರ್ಧ್ವನೇತ್ರಕೋಟಲಮಜ್ಜಾ-ತಂತು (Supra orbital nerve)

92 ಊರ್ಧ್ವಪಶ್ಚಿಚಾಲನೀರೋಹಿಣಿ (Posterior Ethmoidal nerve)

93 ಲೋಮಶ ಅಂಡ (Ciliary ganglion)

94 ಹ್ರಸ್ವಲೋಮಶಮಜ್ಜಾತಂತು (Short ciliary nerve)

95 ನೇತ್ರಚಾಲಕಮಜ್ಜಾತಂತು (Occulaomtor nerve)

96 ಮಲಸೂತ್ರಮಜ್ಜಾತಂತು (Trochlear nerve)

97 ತ್ರಿಭಾಗಮಜ್ಜಾತಂತು (Trigeminal nerve)

98 ಉಪಹಾರಿಣಿಮಜ್ಜಾತಂತು (Abducent nerve)

99 ಅಸ್ಥಿಮಜ್ಜಾತಂತು (Facial nerve)

ಬರೆದವರು:- ಡಾ। ಎಮ್. ಸಿ. ಮೋದಿ, ನೇತ್ರಯಜ್ಞ ಪುರೋಹಿತರು.

ಶಿರೋರೋಗ ಮತ್ತು ಚಿಕಿತ್ಸೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬರೆಯುವರು:- ವೈದ್ಯ ಗುಂಡಾಚಾರ್ಯ ಜಮಖಂಡಿ, ಹುಬ್ಬಳ್ಳಿ L. A. M. S. ...

೭. ಖಲತಿ:- ಇದು ಸಹ ಇಂದ್ರಲುಪ್ತದಂತೆಯೇ ಕಾಣುವ ತಲೆಯ ವ್ಯಾಧಿಯು. ಇದರಲ್ಲಿ ಕೂದಲುಗಳು ಉದುರುವದು ಹೆಚ್ಚಾಗಿ ಇರುವದು. ಕ್ರಮೇಣ ತಲೆಯು ಬೋಳಾಗುತ್ತ ಹೋಗುವದು.

ಇದು ವಾತದಿಂದ ಆಗಿದ್ದರೆ- ಅಗ್ನಿಯಿಂದ ಸುಟ್ಟಂತಿರುವದು. ಪಿತ್ತದಿಂದಾಗಿದ್ದರೆ ಬೆವರುತ್ತಿರುವ ಸಿರಾಜಾಲಗಳಿಂದ ಕೂಡಿದ್ದಾಗಿರುವದು, ಕಫದಿಂದಾಗಿದ್ದರೆ ದಪ್ಪವಾದ ಚರ್ಮ ಉತ್ಪನ್ನವಾಗಿರುವದು, ಆ ಭಾಗವು ಹೊಳೆಯುವದು. ಇದಲ್ಲದೆ ಚರ್ಮದ ಮೇಲೆ ಆ ದೋಷದ ವರ್ಣಗಳು ಕಾಣಿಸಿಕೊಳ್ಳುವವು. ಸನ್ನಿಪಾತದಲ್ಲಿ ಸರ್ವ ಲಕ್ಷಣಗಳೂ ಕೂಡಿರುವವು ಎಂಬುದು ಸ್ಪಷ್ಟ. ಅಗ್ನಿಯಿಂದ ಸುಟ್ಟಂತೆ ಕಾಣುವ, ಕೂದಲು ಎಲ್ಲಾ ಉದುರಿರುವ, ದಾಹಯುಕ್ತವಾದ ಖಲತಿಯು ಅಸಾಧ್ಯವಾದುದು.

ಚಿಕಿತ್ಸೆ:— ಖಲತಿ, ಪಲಿತ, ಕೂದಲು ಹಸರು ಆಗುವದು ಇವುಗಳಿಗೆ ಮೊದಲು ಶೋಧನಕ್ಕೆ ಕೊಟ್ಟು ಆ ಮೇಲೆ ನಸ್ಯ ಮುಖಕ್ಕೆ ತಲೆಗೆ ಅಭ್ಯಂಗ ಮತ್ತು ಲೇಪನಗಳನ್ನು ಮಾಡಿಸಬೇಕು.

ಬೃಹತ್ಯಾದಿ ಮತ್ತು ಜೀವನೀಯ ಗಣಗಳಲ್ಲಿಯ ಔಷಧಗಳಿಂದ ತಯಾರಿಸಿದ ತೈಲವನ್ನು ನಸ್ಯ ಹಾಕಬೇಕು. ಅಥವಾ ೧ ತಿಂಗಳು ಕೇವಲ ಹಾಲಿನ ಆಹಾರವನ್ನೇ ಸೇವಿಸಿ ಬ್ರಹ್ಮಚರ್ಯದಿಂದ ಇದ್ದು ಬೇವಿನ ಎಣ್ಣೆಯ ನಸ್ಯವನ್ನು ಹಾಕಬೇಕು.

ಚಳ್ಳಬೀಜ, ತಾರೀಕಾಯಿ ಬೀಜ, ಎಳ್ಳು, ಅಗಸೀ, ಕಾಡಾಂಚಿಕೇ ಬೀಜ ಇವುಗಳನ್ನು ಸಮಭಾಗ ತೆಗೆದುಕೊಂಡು ಅವುಗಳಿಗೆ ಹಾಲಿ, ತಿಂಗಳ, ಗೊರಟಿಕೆ, ಕಾಡಿಗ್ಗರಗು ಇವುಗಳ ಸ್ವರಸದ ಭಾವನೆಕೊಟ್ಟು ಒಣಗಿಸಿ, ಅವುಗಳನ್ನು ಆಡಿನ ಮೂತ್ರದಲ್ಲಿ ಅರೆದು ಕಬ್ಬಿಣದ ಪಾತ್ರೆಗೆ ಲೇಪಮಾಡಿ ಬಿಸಿಲಲ್ಲಿ ಇಡಬೇಕು. ಹೀಗೆ ಮಾಡುವದರಿಂದ ಅದರಿಂದ ಎಣ್ಣೆ ಹೊರಡುವದು. ಈ ಎಣ್ಣೆಯನ್ನು ಮೂಗಿನಲ್ಲಿ ಹಾಕಬೇಕು ಕೇವಲ ಹಾಲಿನ ಪಥ್ಯಮಾಡಬೇಕು.

ಹಾಲು, ಗೊರಟಿಗೆರಸ, ಕಾಡಿಗ್ಗರಗಿನ ರಸ, ತುಳಸೀ ರಸ ಇವುಗಳನ್ನು ಪ್ರತ್ಯೇಕ ೧೬ ತೊಲೆ ತೆಗೆದುಕೊಂಡು ಅದಕ್ಕೆ ೪ ತೊಲೆ ಜ್ಯೇಷ್ಠಮಧುವಿನ ಕಲ್ಕವನ್ನು ಸೇರಿಸಿ ೩೨ ತೊಲೆ ಎಣ್ಣೆ ಬೆರಸಿ ಪಾಕಕ್ಕೆ ಇಟ್ಟು ತೈಲ ಸಿದ್ಧಮಾಡಿ ನಸ್ಯ

ಕೊಳ್ಳಬೇಕು. ಆರಿದ್ದಮೇಲೆ ಸೋಸಿ ಕಲ್ಲಿನ ಪಾತ್ರೆಯಲ್ಲಾಗಲೀ, ಅಥವಾ ಟಗರಿನ ಕೊಂಬಿನಲ್ಲಾಗಲೀ, ಹಾಕಿಟ್ಟು ಮೂಗಿದಲ್ಲಿ ನಸ್ಯ ಹಾಕುತ್ತ ಹೋಗಬೇಕು.

ದುಗ್ಧಿಕಾ, ಕಣಗಲಬೇರು ಇವುಗಳನ್ನು ಹಾಲಿನಲ್ಲಿ ಅರೆದು, ನರೆತ ಕೂದಲನ್ನು ಕಿತ್ತಿ ಆ ಭಾಗದಲ್ಲಿ ಈ ಕಲ್ಕದ ಬಿಲ್ಲೆಮಾಡಿ ಒತ್ತಿ ಅಂಟಿಸಬೇಕು. ಕೂದಲು ಕರ್ರಗಾಗುವವು. ಚಾರೊಳಿ, ಜ್ಯೇಷ್ಠಮಧು, ಜೀವನೀಯ ಗುಣದ ಔಷಧಗಳು, ಕರಿಎಳ್ಳು ಇವುಗಳನ್ನು ಹಾಲಿನಲ್ಲಿ ಅರೆದು ಮುಖಕ್ಕೆ ಲೇಪ ಹಾಕಿದರೆ ಹಸರು ಕೂದಲು ಕಪ್ಪು ಆಗುವವು, ನೀರಿಗೆಗಳು (ಸುಕ್ಕು) ಹೋಗುವವು.

ಎಳ್ಳು, ನೆಲ್ಲೀಚೆಟ್ಟು, ಕಮಲಕೇಸರ, ಜ್ಯೇಷ್ಠಮಧು ಇವುಗಳನ್ನು ಅರೆದು ಜೇನಿನಲ್ಲಿ ಕಲಿಸಿ ತಲೆಗೆ ಹಚ್ಚಬೇಕು. ಕೂದಲು ಬೆಳೆಯುವವಲ್ಲದೆ ಕರ್ರಗೂ ಆಗುವವು.

ಜಟಾಮಾಂಸಿ, ಕೋಷ್ಠ, ಕರಿಎಳ್ಳು, ಉಪಳಸರೀ, ನೀಲಕಮಲ, ಜೇನು ಇವುಗಳನ್ನು ಹಾಲಿನಲ್ಲಿ ಅರೆದು ತಲೆಗೆ ಹಚ್ಚಿದರೆ ಕೂದಲುಗಳು ಚನ್ನಾಗಿ ಬೆಳೆಯುವವು.

ಕಬ್ಬಿಣದ ಹುಡಿ, ಕಾಡಿಗ್ಗರಗು, ತ್ರಿಫಲಾ, ಕರೇಮಣ್ಣು ಇವುಗಳನ್ನು ಒಂದು ತಿಂಗಳು ಕಬ್ಬಿನ ರಸದಲ್ಲಿಡಬೇಕು. ಆ ಮೇಲೆ ತಲೆಗೆ ಹಚ್ಚಬೇಕು. ಕೂದಲುಗಳು ಬೇರುಸಹಿತ ಕರ್ರಗೆ ಆಗುವವು.

ಪುಂಡರೀಕ, ಜ್ಯೇಷ್ಠಮಧು, ಹಿಪ್ಪಲಿ, ಚಂದನ, ನೀಲಿಕಮಲ, ಇವುಗಳ ಕಲ್ಕವನ್ನೂ ಹಾಕಿ ನೆಲ್ಲಿಕಾಯಿ ಸ್ವರಸದಿಂದ ತಯಾರಿಸಿದ ತೈಲವನ್ನು ನಸ್ಯ, ಅಭ್ಯಂಗಗಳ ಉಪಯೋಗಮಾಡಿದರೆ ಮಸ್ತಕರೋಗಗಳೂ, ವಲಿತ, ಪಲಿತಗಳೂ ನಾಶವಾಗುವವು.

ಶತಾವರೀ, ಹಾಲೀಬಳ್ಳಿ, ಇವುಗಳ ಕಷಾಯ, ಹಾಲು, ಇವುಗಳಿಂದ ಯಮಕಸ್ನೇಹವನ್ನು ತಯಾರಿಸಬೇಕು. ಆ ಸ್ನೇಹ ತಯಾರಿಸುವಾಗ ಅದರೊಂದಿಗೆ ಜೀವನೀಯ ಔಷಧಗಳ ಕಲ್ಕವನ್ನೂ ಹಾಕಬೇಕು. ಹೀಗೆ ತಯಾರಿಸಿದ ತೈಲದ ನಸ್ಯವನ್ನುಪಯೋಗಮಾಡಿದರೆ ಜತ್ರೂರ್ಧ್ವ ರೋಗಗಳೆಲ್ಲ ನಾಶವಾಗುವವು.

ಪಿತ್ತ, ಕರುಳು, ಕಾಲು, ಮಲ, ಚುಂಚು, ಗರಿ ಇವುಗಳನ್ನು ತೆಗೆದ ನವಿಲಿನ ಮಾಂಸವನ್ನೂ, ದಶಮೂಲವನ್ನೂ, ಕಲ್ಲಂಗಡಲೆಯನ್ನೂ, ರಾಸ್ನಾ, ಜ್ಯೇಷ್ಠಮಧುಗಳನ್ನೂ ೧೨-೧೨ ತೊಲೆಯಂತೆ ಪ್ರತಿಯೊಂದನ್ನು ತೆಗೆದುಕೊಂಡು ನೀರಿನಲ್ಲಿ ಹಾಕಿ ಕಷಾಯಮಾಡಬೇಕು. ಈ ಕಷಾಯಕ್ಕೆ ಒಂದು ಪ್ರಸ್ಥ (೧೨೮ ತೊಲ) ತುಪ್ಪ, ಅಷ್ಟೇ ಹಾಲು ಮತ್ತು ಮಧುರ ಔಷಧಗಳ ಕಲ್ಕವನ್ನು ಬೆರಸಿ ಕಾಸಿ ತುಪ್ಪವನ್ನು ತಯಾರಿಸಬೇಕು. ಇದನ್ನು ಹೊಟ್ಟೆಗೆ ಕೊಡುವವಲ್ಲದೆ, ಬಸ್ತಿ, ಅಭ್ಯಂಗ, ನಸ್ಯ ಇವುಗಳಲ್ಲಿ ಉಪಯೋಗಮಾಡುವದರಿಂದ ಜತ್ರೂರ್ಧ್ವರೋಗಗಳು ನಾಶವಾಗುವವು. ಇದಕ್ಕೆ ಮಯೂರಘೃತವೆಂದು ಹೆಸರು.

ಇದಕ್ಕಿಂತಲೂ ಹೆಸರಾದ ಒಳ್ಳೇ ಗುಣಕಾರಿಯಾದ ... ಸಾಮಾನ್ಯವಾಗಿ ನೆಂಬುದೊಂದು ದೊಡ್ಡ ರೋಗವಿದೆ. ಇದು ... ಕ್ಷೀಣತೆ, ಸ್ಮರಣಶಕ್ತಿ, ದಣಿವು, ಕೆಮ್ಮು, ಅಜೀರ್ಣ, ... ವೀರ್ಯದೋಷಗಳನ್ನು ಉಂಟುಮಾಡುತ್ತದೆ, ... ವನ್ನು ಕೊಡುವುದು.

ಇದರಂತೆಯೇ ಚರ್ಮರೋಗಗಳಿಗೆ ..., ..., ..., ...ಗಳ ಮಾಂಸದಿಂದಲೂ ತುಪ್ಪವನ್ನು ತಯಾರಿಸಿ ಕೊಡುವರು.

೭ **ಪಲಿತ**:— ಶೋಕ, ಶ್ರಮ, ಸಿಟ್ಟು ಇವುಗಳಿಂದ ಉಂಟಾಗುವ ಶರೀರದಲ್ಲಿಯ ಉಷ್ಣತೆಯು ತಲೆಯಲ್ಲಿ ಸೇರಿದರೆ ದೋಷಗಳಿಂದ ಕೂಡಿ ಕೂದಲುಗಳನ್ನು ಪಕ್ವವಾಗಿ ಬೆಳ್ಳಗಾಗುವಂತೆ ಮಾಡುತ್ತದೆ. ಇದಕ್ಕೆ "ಬಿಳಿಕೂದಲು" ಎನ್ನುವರು.

ವಾತದಿಂದ– ಕೂದಲು ಒಡೆದಿರುತ್ತವೆ, ಧೂಮ್ರವರ್ಣವುಳ್ಳವು, ಒರಟು ಬರಕಾಗಿಯೂ, ಜಿಡ್ಡಿಲ್ಲದ್ದೂ, ನೀರಿನಂತೆ ಕಾಂತಿಯುಳ್ಳವು ಆಗಿರುವವು.

ಪಿತ್ತದಿಂದ– ದಾಹಯುಕ್ತವಿದ್ದು ಹಳದೀ ವರ್ಣದ ಛಾಯೆಯಿಂದ ಕೂಡಿರುವವು.

ಕಫದಿಂದ– ಸ್ನಿಗ್ಧ ಮತ್ತು ಹೆಚ್ಚಿಗೆ ಬೆಳೆಯತಕ್ಕದ್ದಾಗಿರುವದಲ್ಲದೆ ದಪ್ಪನಾಗಿಯೂ, ಬಿಳೀ ವರ್ಣವುಳ್ಳದ್ದಾಗಿಯೂ ಇರುವವು.

ಸನ್ನಿಪಾತದಿಂದ– ಸರ್ವ ಲಕ್ಷಣಗಳೂ ಕೂಡಿರುವವು. ತಲೆಗೆ ... ಅನೇಕ ದಿನಗಳ ವರೆಗೆ ಉಳಿಯುವದರಿಂದ ಆಗುವ ಪಲಿತವು ಅನೇಕ ವರ್ಣವುಳ್ಳದಿದ್ದು ಮುಟ್ಟಿದರೆ ಸಹನವಾಗಗೊಡುವದಿಲ್ಲ. ಇದು ರಕ್ತಜ ವ್ಯಾಧಿಯು.

೮ ಮುಪ್ಪಿನಿಂದ ಉಂಟಾಗುವ ಪಲಿತ ರೋಗವು. ಇದರಲ್ಲಿ ವಾರ್ಧಕ್ಯದ ಲಕ್ಷಣಗಳೆಲ್ಲ ಇದ್ದು ಚರ್ಮದ ಸುಕ್ಕು ಇರುವದು.

ಚಿಕಿತ್ಸೆ:- ಇವುಗಳಿಗೆಲ್ಲ ಅಂದರೆ ಎಲ್ಲಾ ಪಲಿತ ರೋಗಗಳಿಗೆ ಖಲತಿಯಲ್ಲಿಯ ಚಿಕಿತ್ಸೆಯೇ ಉಪಯೋಗವಾಗುವದು.

೯ ಮುಪ್ಪಿನಿಂದ ಬರತಕ್ಕ ಖಲತಿಗೆ ಮಾತ್ರ ರಸಾಯನ ವಿಧಾನವನ್ನು ಮಾಡಿಸಬೇಕು. ಮತ್ತು ಖಲತಿಯ ಚಿಕಿತ್ಸೆಯನ್ನು ನಡೆಸಬೇಕು. ರಸಾಯನ ಸೇವನ ವಿಧಿಯಿಂದಲೇ ಮುಪ್ಪಿನ ಲಕ್ಷಣಗಳೆಲ್ಲ ಹೋಗುವದಲ್ಲದೆ ಕೂದಲು ಕಪ್ಪಾಗಿ ಮೈಮೇಲೆ ನೆರಿಗೆಗಳು ಕಡಿಮೆ ಆಗುವದೆಂದು ಹೇಳಿದ್ದಾರೆ. ಖಲತಿಯ ಚಿಕಿತ್ಸೆಯನ್ನು ಮಾಡುವದಾದರೆ ರಸಾಯನ ಸೇವನೆ ವಿಧಿ ಮಾಡಿದ ಮೇಲೆ ಮಾಡಬೇಕು.

ಔಷಧೀಕಾಲ

ಲೇಖಕ:- ರಾ. ಕೃ. ಕುಲಕರ್ಣಿ ಜಿನರಾಳಕರ, ಆಯುರ್ವೇದಾಚಾರ್ಯ

(ನವಂಬರ ಸಂಚಿಕೆಯಿಂದ)

ಸಮಾನಕಾಲ

ಸಮಾನವಾತದ ವಿಕೃತಿಯಿಂದ ವಿಶೇಷತಃ ಕೋಷ್ಠಗತ ವ್ಯಾಧಿಗಳಾಗುತ್ತವೆ. ಆದ್ದರಿಂದ ಇಂಥ ರೋಗಗಳಲ್ಲಿಯ ಕಾಲವೆಂದರೆ ಊಟದ ಮಧ್ಯದಲ್ಲಿ ಇದಕ್ಕೆ ಸಮಾನಕಾಲವೆಂದೂ ಅನ್ನುತ್ತಾರೆ.

ಮಧ್ಯೇತು ಪೀತಮಪಹಂತ್ಯ ವಿಸಾರಭಾವಾ ।
ದ್ಧೈ ಮಧ್ಯದೇಹಮಭಿಭೂಯ ಭವಂತಿ ರೋಗಾಃ ॥

ಮಧ್ಯದೇಹಗತ ವ್ಯಾಧಿ ಅಂದರೆ ಕೋಷ್ಠಗತ ವ್ಯಾಧಿಗಳು, ಇವುಗಳಲ್ಲಿ ಸಮಾನವಾತದ ವಿಕೃತಿ ಇದ್ದರೂ ಸಹ ಅದರಲ್ಲಿಯು ಬೇರೆ ಬೇರೆ ಅವಸ್ಥೆಗಳಲ್ಲಿ ಬೇರೆ ಬೇರೆ ವಾತದ ವಿಕೃತಿಯಿಂದ ಬೇರೆ ಬೇರೆ ಲಕ್ಷಣಗಳು ಕಂಡುಬರುತ್ತವೆ. ಆಗ್ಯೆ ಅವುಗಳನ್ನು ಲಕ್ಷ್ಯಕ್ಕೆ ತಂದು ಔಷಧಿಕಾಲವನ್ನು ನಿರ್ಣಯಿಸಬೇಕು. ಉದಾ:- ಗುಲ್ಮರೋಗದಲ್ಲಿ ಸಮಾನ ವಾತದ ವಿಕೃತಿ ಇದ್ದರೂ ಸಹ ಹಲವು ಸಾರಿ ಅಪಾನ ವಾತದ ವಿಕೃತಿ ಇರುತ್ತದೆ. ಆಗ್ಯೆ ಅಪಾನವಾಯುವಿಗೆ ಅನುಸರಿಸಿ ಔಷಧಿ ಕಾಲದ ನಿರ್ಣಯ ಮಾಡಬೇಕು. ಅಂದರೆ ಊಟದ ಮಧ್ಯ ಮತ್ತು ಊಟದ ಆರಂಭಕ್ಕೆ ಔಷಧ ಕೊಡಬೇಕು. ಇದೇ ಉದ್ದೇಶದಿಂದ ಗುಲ್ಮರೋಗದಲ್ಲಿ ಹಿಂಗಾಷ್ಟಕ ಚೂರ್ಣವನ್ನು ಊಟದ ಆರಂಭಕ್ಕೆ ಕೊಡಲಿಕ್ಕೆ ಹೇಳಿದ್ದಾರೆ.

ಪ್ರಥಮ ಕವಲ ಭೋಜ್ಯೋ ಸರ್ಪಿಷಾಸಂಪ್ರಯುಕ್ತೋ ।
ಜನಯತಿ ಜಠರಾಗ್ನಿಂ ವಾತಗುಲ್ಮಂ ನಿಹಂತಿ ॥

ಸಂಗ್ರಹಣಿ ರೋಗದಲ್ಲಿಯಾದರೂ ಸಹ ಮಲವು ಅತಿ ಕಠಿಣವಾಗಿದ್ದರೆ ಊಟದ ಆರಂಭಕ್ಕೆ ಸಘೃತ ಲವಣ ಕೊಡಬೇಕು.

ಪುರೀಷಂ ಯಸ್ಯಕೃಚ್ಛ್ರೇಣ ಕಠಿಣತ್ವಾದ್ವಿಮುಂಚತಿ ।
ಸಸ್ಪೃತಂ ಲವಣೈರ್ಯುಕ್ತಂ ನರೋಽನ್ನಾವಗ್ರಹಂ ಪಿಬೇತ್ ॥

ವ್ಯಾನಕಾಲ ಅಥವಾ ಅಂತರಾಭಿಕ್ತಕಾಲ

ವ್ಯಾನೋಹೃದಿಸ್ಥಿತೋಕೃತ್ಸ್ನದೇಹಚಾರೀಮಹಾಜವಃ ।
ಗತ್ಯಪಕ್ಷೇಪಣೋತ್ಕ್ಷೇಪ ನಿಮೇಷೋನ್ಮೇಷಣಾದಿಕಾಃ ॥

ಕೃತ್ಸ್ನದೇಹಚರೋವ್ಯಾನೋ ರಸಸಂವಹನೋದ್ಯತಃ ।
ಸ್ವೇದಾಸೃಕ್ ಸ್ರಾವಣಶ್ಚಾಪಿಪಂಚಧಾಚೇಷ್ಟಯತ್ಯಪಿ ॥
ಕ್ರುದ್ಧಸ್ಥ ಕುರುತೆರೋಗಾನ್ ಪ್ರಾಯಶಃ ಸರ್ವದೇಹಗಾನ್ ।

ವ್ಯಾನವಾತದ ಸ್ಥಾನವು ಹೃದಯವು. ಈ ವಾಯುವು ಸರ್ವ ಶರೀರದಲ್ಲಿ ಸಂಚರಿಸುತ್ತದೆ. ಇದಕ್ಕೆ ೫ ಪ್ರಕಾರದ ಕಾರ್ಯವಿರುತ್ತದೆ. ಉತ್ಕ್ಷೇಪಣ ಅಪಕ್ಷೇ

ಹಣ, ಆಕುಂಚನ, ಪ್ರಸರಣ, ನಿಮೇಷ, ಉನ್ಮೇಷ, ಜೃಂಭಣೆ [illegible] ವ್ಯಾನ
ವಾತದಿಂದ ಆಗುತ್ತದೆ.

ಈ ವಾತದ ವಿಕೃತಿಯಿಂದ ಬರುವ ರೋಗಗಳು: ಸರ್ವದೇಹಗತ ರೋಗಗಳು [illegible]. ಈ ರೋಗಗಳಿಂದರೆ ಜ್ವರ, ರಕ್ತಪಿತ್ತ, ಅತಿಸಾರ, ಮೂರ್ಛೆ ಮುಂತಾದವುಗಳು. ಆದ್ದರಿಂದ ಇಂಥ ರೋಗಗಳಲ್ಲಿ ವ್ಯಾನಕಾಲಕ್ಕೆ ಅಂದರೆ ಮಧ್ಯಾಹ್ನದ ಊಟದ ನಂತರ ಔಷಧಿ ಯೋಜನೆ ಮಾಡಬೇಕು. [illegible] ಸೂತ್ರವಿರುತ್ತದೆ.

ಸುಶ್ರುತ ಸಂಹಿತೆಯಲ್ಲಿ ಈ ಕಾಲಕ್ಕೆ ಅಂತರಾಭಕ್ತವೆಂದು [illegible] ಮತ್ತು ಅವುಗಳಲ್ಲಿ ಕೆಲವು ಗುಣಗಳನ್ನು ಅಧಿಕವಾಗಿ ಹೇಳಿದ್ದಾರೆ. ಈ ಕಾಲಕ್ಕೆ ಕೊಟ್ಟ ಔಷಧಿಯು ಹೃದಯ ಮತ್ತು ಮನಸ್ಸು ಇವುಗಳಿಗೆ [illegible]ತ್ತದೆ. ಅಗ್ನಿದೀಪಕವಿದ್ದು [illegible].

ಹೃದ್ಯಂ ಮನೋಬಲಕರಂ [illegible] ।
[illegible]

ಕೆಲವು ರೋಗಗಳಲ್ಲಿ ಇದರ ಜೊತೆಗೆ ಬೇರೆ ಬೇರೆ ವಾತದ ವಿಕೃತಿ ಅನ್ನು ಕಂಡು ಬರುತ್ತದೆ. ಅಂಥ ರೋಗಗಳಲ್ಲಿ ಯಾವ ಯಾವ ವಾತದ ಕಾರ್ಯಗಳು ವಿಕೃತವಾಗಿರುತ್ತವೆಯೋ ಆಯಾ ವಾತದ ಕಾಲಕ್ಕನುಸರಿಸಿ ಯೋಜನೆ ಮಾಡಬೇಕು. ಉದಾ:-

[illegible] ।

ಶುಕ್ರ ದೋಷದಲ್ಲಿ ವ್ಯಾನ ಮತ್ತು ಅಪಾನವಿಕೃತಿ ಹ್ಯಾಗಾಗುತ್ತದೆಂಬುದನ್ನು ನೋಡುವಾ.

ಅಪಾನವಾತದ ವಿಕೃತಿಯಿಂದ ಶುಕ್ರದೋಷ ಉತ್ಪನ್ನವಾಗುತ್ತದೆಂದು ಈ ಮೊದಲೇ ಹೇಳಿದೆ.

ಸಪ್ತವಿಂಶುಕ್ರಧರಾನಾಮ । [illegible] । ಎಂದು ಸುಶ್ರುತ ಸಂಹಿತೆಯ ಶಾರೀರ ಸ್ಥಾನದಲ್ಲಿ ಹೇಳಿದ್ದಾರೆ. ಅದರಿಂದ ಶುಕ್ರಧರಾಕಲೆಯು ಸರ್ವಶರೀರವ್ಯಾಪಿಯಾಗಲಿದೆ ಅಂತ ಸಿದ್ಧವಾಯಿತು. ಹಾಗೂ ವ್ಯಾನವಾಯುವು ಸಹ ಸರ್ವಶರೀರವ್ಯಾಪಿ ಆದೆ । ವ್ಯಾನಃಸರ್ವಶರೀರಗಃ। ಎಂದು ಹೇಳಿದ್ದಾರೆ. ಆದ್ದರಿಂದ ಶುಕ್ರದೋಷದಲ್ಲಿ ಅಪಾನ ಮತ್ತು ವ್ಯಾನವಾತದ ಕಾಲಕ್ಕೆ ಔಷಧಿ ಯೋಜನೆ ಮಾಡಬೇಕು. ಇದೇ ಪ್ರಕಾರ ಪ್ರಮೇಹದಲ್ಲಾದರೂ ಹೀಗೆ ಉಪಪತ್ತಿ ವಿಚಾರ ಮಾಡಿ ಕಾಲ ನಿರ್ಣಯ ಮಾಡಬೇಕು.

ಇನ್ನೊಂದು ಉದಾಹರಣೆ. ಅತಿಸಾರವು ಸಮಾನವಾತದ ವಿಕೃತಿಯಿಂದ ಉತ್ಪನ್ನವಾಗುತ್ತದೆಂದು ಹೇಳಿದ್ದಾರೆ. ಪುನಃ ವ್ಯಾನವಾತದ ಪ್ರಕೋಪದಿಂದಲೂ ಈ ರೋಗವಾಗುತ್ತದೆಂದು ಹೇಳಿದ್ದಾರೆ.

ಜ್ವರಾತಿಸಾರ ರಕ್ತಪಿತ್ತ ಪ್ರಭೃತೀನ್. । ಅಂದಮೇಲೆ ಈ ವಿಕಾರದಲ್ಲಾದರೂ ಸಮಾನಕಾಲಕ್ಕೆ ಅನುಸರಿಸಿ ಊಟದ ಮಧ್ಯದಲ್ಲಿ ಹಾಗೂ ವ್ಯಾನಕಾಲಕ್ಕೆ ಅನುಸರಿಸಿ ಮಧ್ಯಾಹ್ನದ ಊಟದ ನಂತರ ಔಷಧಿ ಯೋಜನೆ ಮಾಡಬೇಕು. ಈ ಕಾಲಕ್ಕೆ ಅಂತರಾಭಕ್ತವೆಂದೂ ಅನ್ನುತ್ತಾರೆ ಈ ಕಾಲದಲ್ಲಿ ಯೋಜಿಸಿದ ಔಷಧವು ಅಗ್ನಿ ದೀಪನಮಾಡಿ ಅಗ್ನಿಮಾಂದ್ಯವನ್ನು ಕಡಿಮೆ ಮಾಡುತ್ತದೆ.

ಉದಾನವಾತದ ವಿಕೃತಾವಿಕೃತ ಕಾರ್ಯಗಳು

ಉರಸ್ಥಾನಮುದಾನಸ್ಯ ನಾಸಾನಾಭಿಗಲಾಂಶ್ಚರೇತ್ ।
ವಾಕ್‌ಪ್ರವೃತ್ತಿ ಪ್ರಯತ್ನೋರ್ಜಾಬಲವರ್ಣ ಸ್ಮೃತಿಕ್ರಿಯಃ ॥
ಉದಾನೋನಾಮಯಸ್ತೂರ್ಧ್ವಮುಪೈತಿ ಪವನೋತ್ತಮಃ ।
ತೇನ ಭಾಷಿತಗೀತಾದಿ ವಿಶೇಷೋಭಿಪ್ರವರ್ತತೇ ॥
ಊರ್ಧ್ವಜತ್ರು ಗತಾನ್ ರೋಗಾನ್ ಕರೋತಿಚ ವಿಶೇಷತಃ ।

ಉದಾನವಾತದ ವಿಕೃತಿಯಿಂದ ಊರ್ಧ್ವಜತ್ರುಗತ ವಿಕಾರಗಳಾಗುತ್ತವೆ.

ಉದಾನವಾತದ ಕಾಲವೆಂದರೆ ರಾತ್ರಿಯ ಊಟದ ನಂತರ,

ಸಾಯಮಾಶಸ್ಯತೂತ್ತರೇ ।

ಈ ಕಾಲಕ್ಕೆ ಅಧೋಭಕ್ತಕಾಲವೆಂದೂ ಅನ್ನುತ್ತಾರೆ.

ವಾಕ್‌ಪ್ರವೃತ್ತಿ ಪ್ರಯತ್ನ ಬಲವರ್ಣಸ್ಮೃತಿ ಇವುಗಳಲ್ಲಿ ಏನಾದರೂ ವಿಕೃತಿಯಾಗಿದ್ದರೆ ಸಂಜೆಯ ಊಟದ ನಂತರ ಔಷಧಿಯೋಜನೆ ಮಾಡಬೇಕು.

ಸ್ವರಸಾದರೋಗದಲ್ಲಿ ಊಟದ ನಂತರ ಕಾಸಮರ್ದಾದಿಘೃತವನ್ನು ಕೊಡಲಿಕ್ಕೆ ಹೇಳಿದ್ದಾರೆ.

ತತ್ರಾಪಿ ವಾತಜೇಕೋಷ್ಣಂ ಪಿಬೇದೌತ್ತರ ಭಕ್ತಿಕಮ್ ।
ಕಾಸಮರ್ದಕ ವಾರ್ತಾಕೀಮಾರ್ಕವಸ್ವರಸೇಘೃತಮ್ ॥
ಸಾಧಿತಂ ಕಾಸಜಿತ್‌ಸ್ವರ್ಯಂ ಸಿದ್ಧಮಾರ್ತ ಗಳೇನವಾ ।
ಕಫಜಸ್ವರಸಾದೆ ಭುಕ್ತ್ವಾ ಅದ್ಯಾತ್ ಪಿಪ್ಪಲೀಂಶುಂಠೀಂ ॥

ಸ್ಮರಣಶಕ್ತಿ ಅಂದರೆ ಸ್ಮೃತಿ ಚೆನ್ನಾಗಿರದಿದ್ದರೆ ಉದಾನ ಕಾಲದಲ್ಲಿಯೇ ಔಷಧಿ ಕೊಡಬೇಕು.

ಅವಬಾಹುಕ ಮತ್ತು ವಿಶ್ವಾಚಿರೋಗಗಳಲ್ಲಿ ಸಂಜೆಯ ಊಟದ ನಂತರ ಔಷಧ ಕೊಡಲಿಕ್ಕೆ ಯೋಗ್ಯ ಕಾಲವಿರುತ್ತದೆ.

ಪ್ರಾಣವಾಯುವಿನ ವಿಕೃತಾವಿಕೃತ ಕಾರ್ಯಗಳು

ಪ್ರಾಣೋತ್ರ ಮೂರ್ಧಗಃ ।
ಉರಃಕಂಠ ಚರೋಬುದ್ಧಿ ಹೃದಯೇಂದ್ರಿಯಚಿತ್ತಧೃಕ್ ।
ಷ್ಠೀವನಂ ಕ್ಷವಥೋದ್ಗಾರ ನಿಶ್ವಾಸಾನ್ನಪ್ರವೇಶಕೃತ್ ॥
ಯೋವಕ್ತ್ರಸಂಚಾರೀ ಸಪ್ರಾಣೋ ನಾಮದೇಹಧೃತ್ ।
ಸೋನ್ನಂ ಪ್ರವೇಶಯತ್ಯಂತಃ ಪ್ರಾಣಾಂಶ್ಚಾಪ್ಯವಲಂಬತೇ ॥
ಪ್ರಾಯಶಃ ಕುರುತೇದುಷ್ಟೋ ಹಿಕ್ಕಾಶ್ವಾಸಾದಿಕಾನ್ ಗದಾನ್ ।

(ಕ್ರಮಶಃ)

ಸಂಜೀವಿನಿ ಅಂದರೇನು?

ವೈದ್ಯ ಎಸ್. ಬಿ. ಎಸ್. ಹೆಗ್ಡೆ, ಕಾರ್ಕಳ (ಪ್ರೋಃ ದಕ್ಷ ಮಂಡಾಗಾರ) ದ. ೪

ಯಾವುದೇ ದೇಶದ ಕಲೆ, ವಿಜ್ಞಾನ, ಸಾಹಿತ್ಯ ಮತ್ತು ಸಂಸ್ಕೃತಿಯು ಸಂಪತ್ತಿ ಹಾಗೂ ಉತ್ಕೃಷ್ಟತೆಗೆ ಆ ದೇಶದ ಸ್ವಾತಂತ್ರ್ಯಕ್ಕೂ ಸಮುದಾಯದ ಸಂಗಡ ನಿಕಟವಾದ ಸಂಬಂಧ ಇರುವುದು.

ಈಗಿನ ಕಾಲದಲ್ಲಿ ಸ್ವತಂತ್ರ ರಾಷ್ಟ್ರಗಳೆಂದು ಮಾನ್ಯವಾದ ದೇಶಗಳಾಗಲೀ ನಾಡಿನಲ್ಲಿ ಸಂಚರಿಸುವ ವಿದ್ವಾಂಸರಾಗಲೀ ಹಿಂದೆ ... ಕಲ್ಪಿಸಿಯು ಸೀಮೆಯ ಹೊರಗೆ ನಿರಾಳ ಪ್ರದರ್ಶನವನ್ನು ತಮ್ಮ ... ದಲ್ಲಿ ತಮ್ಮ ಕಲೆ, ವಿಜ್ಞಾನ ಸಾಹಿತ್ಯ ಮತ್ತು ಸಂಸ್ಕೃತಿಯ ಶ್ರೇಷ್ಠತೆಯನ್ನು ತಿಳಿಸಲು ತಪ್ಪಿರುವರು. ಇದರ ಕಾರಣವು ಸಾರ್ವಭೌಮ ದೇಶದ ... ವಿಷ್ವನ್ನಸಿಗಳ ಬಂಧನಿಯು ... ಬೇಕು. ಹೀಗಾಗದಿರುವೀ ಬಿಟ್ಟರೆ ಅಲ್ಲಿಯ ಸ್ವತಂತ್ರ ... ಸಾಧಕರಾದ ಸಜ್ಜನ ಮುಖಂಡರು ಕಲ್ಪಿಸಿಯು ... ವರೇ ಸಂಪೂರ್ಣ ಸಹಕರಿಸಿದರೇ ಮಾತ್ರ ... ಸಾಧ್ಯ.

ಭಾರತೀಯರ ಅಪರಿಮಿತ ಜ್ಞಾನ ಹಾಗೂ ತಿಳುವಳಿಕೆ ಅವರ ದೇಶದ ಸ್ವಾತಂತ್ರ್ಯತೆ ಹಾಗೂ ಪಾರತಂತ್ರ್ಯತೆಗಳ ಇತಿಹಾಸದಿಂದ ನಿಕಟವಾದ ಸಂಬಂಧವೂ ಇದೆ. ರಾಮಾಯಣ ಹಾಗೂ ಮಹಾಭಾರತಗಳಂತಹ ಶಾಸ್ತ್ರೀಯ ಗ್ರಂಥಗಳೇ ಇದನ್ನು ಸಾರುತ್ತಿವೆ. ಹಾಗೂ ಇಂತಹ ಗ್ರಂಥಗಳು ಭಾರತದ ಸ್ವರ್ಣ ಯುಗದಲ್ಲಿಯ ದ್ಯೋತಕಗಳು.

ಪ್ರಾಚೀನ ಭಾರತೀಯ ವಿಜ್ಞಾನ ಮತ್ತು ಚಿಕಿತ್ಸಾ ಶಾಸ್ತ್ರಗಳ ಕೀರ್ತಿಯು ಎಲ್ಲಾ ದೇಶಗಳ ಸೀಮೆಯಲ್ಲಿಯೂ ಹರಿಯುತ್ತಿತ್ತು. ಇದರ ... ವಿಚಾರಶೀಲ ಅಧ್ಯಯನಗಳು ವಿದ್ವಾಂಸರಿಗೆ ಮಾತ್ರ ಮೀಸಲಾಗಿತ್ತು. **"ಲಕ್ಷ್ಮಣನಿಗೆ ಸಂಜೀವಿನಿಯು ಗುಣದ" ಉಪಯುಕ್ತತೆಯಿಂದ ಪುನಃ ಜೀವದಾನವು ಕೊಡಲ್ಪಟ್ಟಿತು** ಇದು ಭಾರತೀಯ ಆಯುರ್ವೇದದ ಪೂರ್ಣರೂಪ. ಇಂತಹ ಅತ್ಯಮೂಲ್ಯ ಪ್ರಯೋಗದಂತಹ ಚಿಕಿತ್ಸೆಗಳು ಭಾರತೀಯರಲ್ಲಿದ್ದುದರಿಂದಲೇ ಭಾರತೀಯ ಜನಾಂಗವು ಪರದಾಸ್ಯಕ್ಕೆ 200 ವರ್ಷ ಕಾಲ ಸಿಲುಕಿದ್ದರೂ ಪುನಃ ಸ್ವಾತಂತ್ರ್ಯತೆಯಿಂದ ತಲೆ ಎತ್ತುವಂತಾಯಿತು. ಹೀಗಿದ್ದ ಮೇಲೆ ಸ್ವಾತಂತ್ರ್ಯಯುಗದ ಈ ಸಮಯದಲ್ಲಿ ಸಂಜೀವಿನಿಯ ವಿಷಯ ಸಂಶೋಧನೆಯನ್ನು ವೈದ್ಯಸಮುದಾಯವು ಕೈಕೊಳ್ಳದಿರುವುದು ಲಾಂಛನಾಸ್ಪದ.

ಭಾರತೀಯರು ಉದ್ವಿಗ್ನ ಮತ್ತು ಕರ್ಮ ಬಾಹಿರರಾಗಲು ಇಂದಿನ ವರೆಗಿನ ಕಾರಣವು ನಮ್ಮ ದೇಶದ ಪರಾಧೀನತೆಯಿಂದಾಗಿ ಇತ್ತು. ಜತೆಯಲ್ಲಿ ಆ ಪ್ರಭುತ್ವ ನಮ್ಮ ಸಂಸ್ಕೃತಿಯನ್ನು ಅಲುಗಾಡಿಸಿ ತನ್ನ ಸಂಸ್ಕೃತಿಯ ಝುಳಕನ್ನು ನಮ್ಮ ಹೃದಯದಲ್ಲಿ ತುಂಬಾ ಸಮರ್ಥತೆಯಿಂದ ಬಿಂಬಿಸಿತು ಲಾರ್ಡ್ ಮೈಕಾಲೆಯು "ನಾನು ಭಾರತದಲ್ಲಿ ಯಾವ ಶಿಕ್ಷಣ ಪದ್ಧತಿಯ ಪ್ರಚಾರವನ್ನು ಕೈಕೊಂಡಿರುವೆನೋ ಅದರ ಪ್ರಭಾವದಿಂದ ಅಲ್ಲಿಯವರು ಶರೀರದಿಂಧ ಮಾತ್ರ ಭಾರತೀಯರಾಗಿ ಉಳಿಯುವರಲ್ಲದೇ ಮಸ್ತಕವು ಬ್ರಿಟಿಷರದಾಗುವುದು" ಎಂದು ಬರೆದಿರುವನು. ಇದರಿಂದ ಭಾರತೀಯರು ಸ್ವಾಭಿಮಾನಕ್ಕೆ ತಿಲಾಂಜಲಿಯನ್ನಿತ್ತುದಲ್ಲದೆ ಪ್ರಾಚೀನ ಮಹರ್ಷಿಗಳ ಅರ್ಥಪೂರ್ಣ ಹಾಗೂ ಲಾಭಯುಕ್ತನಾದ ವಾಕ್ಯಗಳಲ್ಲಿಯೂ ವಿಶ್ವಾಸ ಮತ್ತು ಶ್ರದ್ಧೆಗಳನ್ನಿಡದಾದರು.

ರಷ್ಯಾದೇಶದ ಪ್ರಮುಖ **ಡಾ. ವಿ. ಎ. ನೆಗೋವಸ್ಕಿಯು** ಸತ್ತವರನ್ನು ಪುನಃ ಜೀವಿಸುವ ಪ್ರಯೋಗ ಶಿಕ್ಷಣದ ಸಫಲತೆಯಲ್ಲಿ ಭಾರತೀಯ ವೈದ್ಯಸಮುದಾಯವು ಎಚ್ಚೆತ್ತು ಪ್ರಾಚೀನ ಧನ್ವಂತರಿ ಮೂರ್ತಿಗಳಾದ "**ಅಶ್ವಿನೀ ಕುಮಾರರು**" ಕತ್ತರಿಸಿದ ತಲೆಯ ಜೋಡಣೆಯ ಸಂಗತಿಯ ಸತ್ಯ ಘಟನೆಗಳು ಎಂದದ್ದಾದರೂ ನಮ್ಮ ಭಾಗ್ಯವೆನಬೇಕು.

ಯಾವಾತನು ಆಯುರ್ವೇದದ ಮನಃಪೂರ್ವಕ ಅಧ್ಯಯನ ಮಾಡಿರುವನೋ ಆತನ ಮುಂದೆ "ಸಂಜೀವಿನಿಯ" ಪರಿಶೋಧನೆಯ ಪ್ರಸ್ತಾಪವು ಉಪಸ್ಥಿತ ಇರುವುದು. ಆಗ ನಮಗೆ ಇದರ ಸ್ವಾಭಾವಿಕ ಅಂತರ ಸಿಕ್ಕೇ ಸಿಕ್ಕುವುದು. ಮುಸಲ್ಮಾನರು ತಮ್ಮ ಕಾರಭಾರದ ಸಮಯದಲ್ಲಿ ನಮ್ಮ ಜ್ಞಾನವಿಜ್ಞಾನ ಗ್ರಂಥ ಭಂಡಾರಗಳನ್ನೇ ಸುಟ್ಟು ಹಾಕಿದರು. ಮತ್ತು ಎಲ್ಲಿಯಾದರೂ ಅಲ್ಪ ಸ್ವಲ್ಪ ಉಳಿದಲ್ಲಿ ಪಾಶ್ಚಿಮಾತ್ಯರು, ಜರ್ಮನರು ಅದರ ಉಪಯುಕ್ತತೆಯನ್ನು ಪಡೆಯಲು ತಮ್ಮ ದೇಶಕ್ಕೆ ಒಯ್ದು ತಮ್ಮ ದೇಶದ ಭಾವನೆ ಕೊಟ್ಟು ಜರ್ಮನ್, ಹಾಗೂ ಇಂಗ್ಲೀಷು ಔಷಧಿಗಳೆಂದು ಪ್ರಸಿದ್ಧಿಗೊಳಿಸಿ ದೇಶದ ವಿಧವಿಧ ವೈದ್ಯಕೀಯ ಕ್ಷೇತ್ರಗಳಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡರು. ಹೀಗಾಗಿ ಆಯುರ್ವೇದವು ಅವರ ದೃಷ್ಟಿಯಿಂದ ತಿರಸ್ಕರಣೀಯವಾಯಿತು.

ಆಯುರ್ವೇದವು ತಿರಸ್ಕೃತ ಅವಸ್ಥೆಯಿಂದ ಉನ್ನತ ಶಿಖರವನ್ನು ಹತ್ತಬೇಕಾದರೆ ನಮ್ಮ ಪ್ರಾಚೀನ ಪ್ರತಿಷ್ಠೆಯ ಗೀತವನ್ನು ಅರ್ಥಬದ್ಧವಾಗಿ ಹಾಡಬೇಕು. ಮರುಕದ ಅಪೇಕ್ಷೆಯೇ ಆಯುರ್ವೇದದ ಉದ್ಧಾರ, ಕರ್ತವ್ಯದ ತಯಾರಿಕೆ. ಆಲಸ್ಯ ಅಂಧ ವಿಶ್ವಾಸ, ಸ್ವಯಂಶೀಲತೆ, ' ವಿವೇಕ ವಿಚಾರ ವಿನಿಮಯಾದಿ ಉತ್ಕೃಷ್ಟ ಲಾಭಪ್ರದ ಗುರುಗಳನ್ನು ಗ್ರಹಣ ಮಾಡುವಂತಾಗಬೇಕು. ಈ ವಿಷಯದಲ್ಲಿ ಲಲಿತಹರಿ ಆಯುರ್ವೇದಿಕ್ ಕೊಲೇಜಿನ ವರ್ತಮಾನ ಸಂರಕ್ಷಕ **ಶ್ರೀ ರಾಜಾರಾಧಾರಮಣ**ರು ಹೇಳಿದ ಮಾತುಗಳು ಉಪಯುಕ್ತವಾದವುಗಳಾ

ಗಿರುವವು. ಇದನ್ನು ವೈದ್ಯ ಸಮುದಾಯವು ಕೂಡ ಗಮನಿಸತಕ್ಕದ್ದಾಗಿದೆ. “ಆಯುರ್ವೇದದ ಸೇವೆಯು ಸಾರ್ವಜನಿಕರಿಂದ ಸ್ವೀಕೃತವಾಗದಿರುವುದು ಪರಸ್ಪರ ಅಸ್ಪೃಶ್ಯತಾ ಮನೋಭಾವದಿಂದಲೇ ಆಗುವುದು.

ವೈದ್ಯ ಮಹಾಶಯರುಗಳಲ್ಲಿ ಹೀಗಿರುವ ಆಯುರ್ವೇದಾಭಿಮಾನದೊಳ್ಳೆ ನನ್ನ ನಿವೇದನೆಯೇನೆಂದರೆ ಅವರು ಆಧುನಿಕ ವಿಜ್ಞಾನ ಮತ್ತು ಸಂಘಟನಾಮಯ ಯುಗದಲ್ಲಿ ತಮ್ಮ ಪರಸ್ಪರ ಮನಸ್ಸಿನಲ್ಲಿರುವ ಮನೋಭಿನ್ನತೆಯನ್ನು ಮರೆತಿರಿಸಿ ಪರಸ್ಪರ ಸಹಾನುಭೂತಿಯಿಂದ ದುಡಿದು ಸಮರ್ಥರಾಗುತ್ತ ಕಾರ್ಯಕ್ಷೇತ್ರದಲ್ಲಿ ಆಯುರ್ವೇದದ ಉದ್ಧಾರ ಕಾರ್ಯವು ಶೀಘ್ರ ಫಲಕಾರಿಯಾದೀತು. ಎಂಬ ಭರವಸೆಯಿಂದ ದುಡಿಯಲು ಸಹಕರಿಸಿ, ಸಂಜೀವಿನಿಯಂತಹ ಅಮೂಲ್ಯ ದ್ರವ್ಯದ ಶೋಧಕ್ಕೆ ಅನುವಾಗೋಣ.

ಸಂಜೀವಿನಿಯ ಪರಿಚಯ

ಸತ್ತ ಪ್ರಾಣಿಯನ್ನು ಪುನಃ ಜೀವ ತರುವ ವಿಚಾರ ಹಿಂದಿನಿಂದಲೂ ಜನಸಾಗಲೂ ಮಾನವನು ವಿಶ್ವಾಸವಿಟ್ಟು ವಿಚಾರವನ್ನು ಕ್ರಿಯೆಯಲ್ಲಿ ತರಲು ಹೊರಟಿರುವುದಕ್ಕೆ ಪರಿಶೋಧನೆಯನ್ನು ನಡೆಸುವುದರಿಂದ ಎಂದೂ ಹಿಂಜರಿಯನು. ಆಶೆಗೆ ಅಂತ್ಯವಿಲ್ಲವೆಂಬುದು ಸುಳ್ಳು. ಆಶೆಯು ಬಲವತ್ತರವಾಗಿದ್ದರೆ ಮಾತ್ರ ಫಲಕಾರಿಯಾಗದು. ಉದ್ದೇಶವು ಒಂದೇ ಇದ್ದು ಅದಕ್ಕನುಕೂಲ ಪ್ರಯತ್ನವಾದಮೇಲೆ ಯಾವ ಕಾರ್ಯದಲ್ಲಾದರೂ ನಿರಾಶನಾಗಲು ಕಾರಣವಿಲ್ಲ. ಪ್ರಯತ್ನದಿಂದ ಎಲ್ಲವನ್ನೂ ಫಲಿಸಿಕೊಳ್ಳುವ ಸಾಮರ್ಥ್ಯವು ಮನುಷ್ಯನಿಗೆ ದೈವೀಕ ದತ್ತವು. ಇದು ನೀತಿ ಶಾಸ್ತ್ರದಲ್ಲೂ ಉಲ್ಲೇಖಿಸಲ್ಪಟ್ಟಿದೆ:—

ಉದ್ಯೋಗಿನಾಂ ಪುರುಷ ಸಿಂಹ ಮುಪೈತಿ ಲಕ್ಷ್ಮೀಃ
ದೈವಂ ಹಿ ದೈವ ಮಿತಿ ಕಾಪುರುಷಾಃ ವದಂತಿ
ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ
ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋಽತ್ರ ದೋಷಃ

ಲಕ್ಷ್ಮೀ (ಸಫಲತೆ)ಯು ಪ್ರಯತ್ನ ಶೀಲ ಪುರುಷನಿಗೆ ಒಲಿಯುತ್ತಾಳೆ. ಕೀಳುಜನರು ಪ್ರಯತ್ನದ ಫಲವನ್ನು ದೈವದ ಮೇಲೆ ಹೊರಿಸುತ್ತಾರೆ. ನಿರಾಶಾವಾದಿಗಳು ಪ್ರಯತ್ನ ಮಾಡದೆಯೂ ದೈವವನ್ನು ಹಳಿಯುವುದುಂಟು. ಆದರೆ ಕಾರ್ಯಾರ್ಥಿ ಮನುಷ್ಯನು ತನ್ನ ಆತ್ಮಶಕ್ತಿಗನುಸಾರ ಪುರುಷಾರ್ಥ ಗಳಿಸಲು ಪ್ರಯತ್ನ ಮಾಡಿದ ಮೇಲೂ ಸಫಲತೆಯು ಪ್ರಾಪ್ತವಾಗದಿದ್ದಲ್ಲಿ ಕಾರ್ಯದ ಯೋಗದಲ್ಲಿ ಯಾವುದೋ ಒಂದು ದೋಷವಿರುವದೆಂದು ತಿಳಕೊಂಡು ಅಂಥಾ ದೋಷ ನಿವಾರಣೆ ಮಾಡಿ ದ್ವಿಗುಣಿತ ಉತ್ಸಾಹದಿಂದಾಗಿ ಕಾರ್ಯಸಿದ್ಧಿಗಾಗಿ ಪ್ರಯತ್ನ ಮಾಡತಕ್ಕದ್ದು.

(ಮುಂದುವರಿಯುವುದು)

ಇಂಜಕ್ಷನ್ ಮತ್ತು ಆಯುರ್ವೇದ:-

ಬರೆದವರು- ಭಿಷಕ ಚೂಡಾಮಣಿ ಆಯುರ್ವೇದ ವಿದ್ವಾನ್,
ಎಮ್. ಎಸ್. ನಾಗೇಶರಾವ್, L. Ag. L. A. M. S. ಮೈಸೂರು.

ಹೈಪೊಡರ್ಮಿಕ್, ಇನ್ಟ್ರಾಮಸ್ಕುಲರ್ ಮತ್ತು ಇನ್ಟ್ರಾವೀನಸ್ ಎಂಬ ಪಾಶ್ಚಾತ್ಯ ವೈದ್ಯರಿಂದ ಮಾಡಲ್ಪಡುವ ಚಿಕಿತ್ಸಾಕ್ರಮಗಳು ಆಯುರ್ವೇದ ಚಿಕಿತ್ಸಾಕ್ರಮಗಳಲ್ಲಿ ಕಂಡುಬರುತ್ತವೆಯೇ ಎಂಬ ವಿಚಾರದಲ್ಲಿ ವಿಷಯ ವಿಮರ್ಶೆಯನ್ನು ಮಾಡುವುದೇ ಈ ಲೇಖನದ ಉದ್ದೇಶವಾಗಿರುತ್ತದೆ.

ಪೊಳ್ಳಾದ ಸೂಜಿಯ ಮುಖಾಂತರವಾಗಿ ಚರ್ಮದೊಳಕ್ಕೆ ಔಷಧವನ್ನು ಸೇರಿಸುವಕ್ರಮಕ್ಕೆ ಹೈಪೊಡರ್ಮಿಕ್ ಇಂಜಕ್ಷನ್ ಕ್ರಮವೆಂದೂ, ಮಾಂಸದೊಳಗೆ ಔಷಧವನ್ನು ಸೇರಿಸುವಕ್ರಮಕ್ಕೆ ಇನ್ಟ್ರಾಮಸ್ಕುಲರ್ ಇಂಜಕ್ಷನ್‌ಕ್ರಮವೆಂದೂ, ಅದೇಪ್ರಕಾರ ಪೊಳ್ಳಾದ ಸೂಜಿಯ ಮುಖಾಂತರ ರಕ್ತವಹ ಶಿರೆಗಳಲ್ಲಿ ಔಷಧವನ್ನು ಸೇರಿಸುವಕ್ರಮಕ್ಕೆ ಇನ್ಟ್ರಾವೀನಸ್ ಇಂಜಕ್ಷನ್‌ಕ್ರಮವೆಂದೂ ಹೇಳುತ್ತಾರೆ.

ಪೊಳ್ಳಾದ ಸೂಜಿಯ ಉಪಯೋಗವಾಗಲೀ ಅಥವಾ ಅದರ ವರ್ಣನೆಯಾಗಲೀ ಆಯುರ್ವೇದ ಸಂಹಿತೆಗಳಲ್ಲಿ ಎಲ್ಲಿಯೂ ಕಂಡುಬರುತ್ತಿಲ್ಲವೆಂಬುದು ಆಯುರ್ವೇದಾಗಮಗಳಲ್ಲಿ ಸಾಮಾನ್ಯ ಪ್ರವೇಶವಾಗಿರುವವರಿಗೂ ತಿಳಿದ ವಿಷಯವೇ ಆಗಿರುತ್ತದೆ.

ರಕ್ತಾದಿ ಧಾತುಗಳೂ ಚರ್ಮವೂ ಕೂಡ ಬಾಹ್ಯರೋಗ ಮಾರ್ಗವೆಂದು ಪರಿಗಣಿಸಲ್ಪಟ್ಟಿದೆ. ಹೃದಯಾದಿ ಮರ್ಮಸ್ಥಾನಗಳೂ ಅಸ್ಥಿಸಂಧಿಗಳೂ ಮಧ್ಯಮರೋಗಮಾರ್ಗವೆಂದು ಎಣಿಸಲ್ಪಟ್ಟಿದೆ. ಹಾಗೆಯೇ ಆಮಪಕ್ವಾಶಯಗಳಿಂದ ಕೂಡಿರುವ ಅನ್ತಃಕೋಷ್ಠಕ್ಕೆ ಅನ್ತಃರೋಗಮಾರ್ಗವೆಂದು ನಿರ್ಧರಿಸಿ ಇರುತ್ತಾರೆ.

ಔಷಧಗಳು ಬಾಹ್ಯ ರೋಗಮಾರ್ಗದೊಳಕ್ಕಾಗಲೀ ಮಧ್ಯಮ ರೋಗ ಮಾರ್ಗದೊಳಕ್ಕಾಗಲೀ ಪ್ರವೇಶಿಸಬೇಕಾದರೆ ಮೊದಲು ಅವು ಚರ್ಮದಲ್ಲಿನ ಭ್ರಾಜಕ ಪಿತ್ತದಿಂದಲಾಗಲೀ, ಅನ್ತಃರೋಗಮಾರ್ಗದಲ್ಲಿರುವ ಪಾಚಕ ಪಿತ್ತದಿಂದಲಾಗಲೀ ಚೆನ್ನಾಗಿ ಪಾಕಹೊಂದಬೇಕಾಗಿರುತ್ತವೆ. ಪಾಕವನ್ನು ಹೊಂದದೇ ಆಮಾವಸ್ಥೆಯಲ್ಲಿ ಬಾಹ್ಯ ಮಧ್ಯಮರೋಗಮಾರ್ಗಗಳನ್ನು ಔಷಧಗಳು ಪ್ರವೇಶಿಸಿದರೆ ಅವು ಶಲ್ಯಗಳಾಗಿ ಪರಿಣಮಿಸಿ ಶರೀರದಲ್ಲಿ ವಿವಿಧ ರೋಗಗಳನ್ನು ಉಂಟುಮಾಡುತ್ತವೆ. ಈ ಕಾರಣದಿಂದ ನಮ್ಮ ಪೂರ್ವಿಕರು ಪೊಳ್ಳುಸೂಜಿಯ ಇತರ ಸಾಧನಗಳಿಂದ ಔಷಧದ್ರವ್ಯಗಳನ್ನು ಭ್ರಾಜಕಪಿತ್ತ ಯಾ ಪಾಚಕ

ಪಿತ್ತದ ಸಹಾಯವನ್ನು ತೆಗೆದುಕೊಳ್ಳದೆ ಹೀಗಾ [illegible] [illegible] ಕ್ರಮವನ್ನು ಯಾರಿಗೆ ತಿಳಿದಿಲ್ಲ.

ಆದರೆ ದ್ರವ್ಯಗಳಲ್ಲಿ ಸ್ವಭಾವಸಿದ್ಧವಾದ ವಿಶೇಷ ಗುಣಗಳಿವೆ. ತೀಕ್ಷ್ಣ ದ್ರವ್ಯಗಳು ಪಾಕವಾದ ನಂತರ ಶರೀರವನ್ನು ಪ್ರವೇಶಿಸುತ್ತವೆ. ವಿಷದ್ರವ್ಯಗಳಾದರೋ ಪಾಕವನ್ನು ಹೊಂದುವುದಕ್ಕೆ ಮುಂಚಿತವಾಗಿಯೇ ಇಡೀ ಶರೀರವನ್ನು ವ್ಯಾಪಿಸುವ ಶಕ್ತಿಯನ್ನುಳ್ಳವುಗಳಾಗಿರುತ್ತವೆ. ಹೀಗೆ ಅವುಗಳು ಕ್ಷಣದಲ್ಲಿ ಇಡೀ ಶರೀರವನ್ನು ವ್ಯಾಪಿಸುವುವು. ವ್ಯವಾಯಿ ಮತ್ತು ಸೂಕ್ಷ್ಮಗುಣಗಳಿಂದ ವಿಶಿಷ್ಟಗಳಾಗಿರುವ ತೀಕ್ಷ್ಣ ದ್ರವ್ಯಗಳಿಗೆ ಸಾಧ್ಯವಾದ ಕಾರ್ಯವಿದು.

ಹೀಗೆ ವಿಷದ್ರವ್ಯಗಳು ಪಾಕವನ್ನು ಹೊಂದುವುದಕ್ಕೆ ಮುಂಚಿತವಾಗಿಯೇ ಶರೀರವನ್ನೆಲ್ಲಾ ತಮ್ಮ ಸೂಕ್ಷ್ಮಗುಣಗಳಿಂದ ವ್ಯಾಪಿಸಲು ಶಕ್ತಿಯುಳ್ಳವುಗಳಾದುದರಿಂದ, ಅವುಗಳನ್ನು ಬಾಹ್ಯ ಮಧ್ಯಮ ರೋಗಮಾರ್ಗಗಳೊಳಗೆ ರಕ್ತವಾಹಿನಿಗಳ ಮೂಲಕ ನೇರಾ ಪ್ರವೇಶಿಸುವುದರಿಂದ ಆಗುವ ಪರಿಣಾಮವು, ಅಗ್ನಿ ಭ್ರಾಜಕ ಪಿತ್ತ ಯಾ ಪಾಚಕ ಪಿತ್ತ ಸಂಸರ್ಗದ ನಂತರ ಮಧ್ಯಮಮಾರ್ಗಗಳನ್ನು ಪ್ರವೇಶಿಸುವುದರಿಂದಾಗುವ ಪರಿಣಾಮವು ಹೆಚ್ಚು ವ್ಯತ್ಯಾಸಗಳಿಂದ ಕೂಡಿರುವುದಿಲ್ಲವೆಂದು ನಮ್ಮ ಪ್ರಾಚೀನರು ತಿಳಿದಿದ್ದಿರಬೇಕು. ಈ ಕಾರಣದ ದೆಸೆಯಿಂದಲೇ ಶೃಂಗೀವಿಷವನ್ನು ಸೂಚಿಯ ತುದಿಗೆ ಅಂಟಿಸಿ ಆ ಸೂಚಿಯನ್ನು ತಲೆಬುರುಡೆಯಲ್ಲಿ ಚುಚ್ಚಿ ಬಾಹ್ಯ ಮಧ್ಯಮ ರೋಗಮಾರ್ಗಗಳಲ್ಲಿ ವಿಷವು ಪ್ರವೇಶಿಸುವ ಕ್ರಮವನ್ನು ಸೂಚಿಕಾಭರಣ ರಸ ಪ್ರಯೋಗದಲ್ಲಿ ವಿವರಿಸಿರುತ್ತದೆ. ಅದೇ ಪ್ರಕಾರ ಬ್ರಹ್ಮರಂಧ್ರದಲ್ಲಿ ಸ್ವಲ್ಪ ಗಾಯಮಾಡಿ ತೀಕ್ಷ್ಣ ವಿಷವನ್ನು ಬಾಹ್ಯ ಮಧ್ಯಮ ರೋಗಮಾರ್ಗಗಳಲ್ಲಿ ಹೊಂದಿಸುವುದನ್ನು ಸೂಚಿಕಾಭರಣ ರಸ ಪ್ರಯೋಗದಲ್ಲಿ ರಸರತ್ನಾಕರ ಗ್ರಂಥಕಾರರು ವಿವರಿಸಿರುತ್ತಾರೆ.

ಶೀಘ್ರವಾಗಿ ವ್ಯಾಪಿಸುವ ಗುಣವಿರುವುದರಿಂದ ವಿಷದ್ರವ್ಯಗಳನ್ನು ಅಂತಃಕೋಷ್ಠದ ಮೂಲಕವೇ ಕೊಡುವುದು ವಾಡಿಕೆಯಾಗಿದೆ. ನಾಡಿಯೇ ನಿಂತು ಹೋಗಿ ಪ್ರಾಣವೇ ಹೋಗುತ್ತದೆ ಎನ್ನುವಾಗ ಇಷ್ಟರಲ್ಲಿ ಮತ್ತೂ ಶೀಘ್ರತಮ ನ್ಯಾಯದಿಂದ ಸೂಚಿಕಾಭರಣದಂತಹ ಶರೀರವನ್ನು ಚುಚ್ಚಿ ಯಾ ಸೂಚಿಕಾಭರಣ ರಸದಂತಹ ಶರೀರವನ್ನು ಗಾಯಮಾಡಿ ಔಷಧವನ್ನು ಯೋಜಿಸುವ ಕ್ರಮಗಳು ಆಯುರ್ವೇದದಲ್ಲಿ ಹೇಳಿರುತ್ತವೆ. ಇದರಿಂದ ಈ ಚುಚ್ಚಿ ಯಾ ಗಾಯಮಾಡಿ ವಿಷ ದ್ರವ್ಯಗಳನ್ನು ಪ್ರಯೋಗಿಸುವುದು ಅಪರೂಪ ಪ್ರಯೋಗವಾಗಿರುತ್ತದೆಂದು ನಾವು ತಿಳಿಯಬೇಕು. ಶೀಘ್ರ ಕಾರ್ಯಗಳನ್ನು ಹೊಂದಿಕೊಳ್ಳಲು ಅಂತಃಕೋಷ್ಠದ ಮೂಲಕವೇ ವಿಷದ್ರವ್ಯಗಳನ್ನು ಉಪಯೋಗಿಸಿದರೆ ಸಾಧಿಸುತ್ತದೆ. ವ್ಯವಾಯಿ ಗುಣವಿರುವ ಮದ್ಯದೊಂದಿಗೆ ಮೂಲಿಕಾದಿಗಳನ್ನು ಉಪಯೋಗಿಸಿಯೂ ಅಂತಃಕೋಷ್ಠದ ಮೂಲಕ ಶರೀರದಲ್ಲಿ ಶೀಘ್ರ ಪರಿಣಾಮಗಳನ್ನು ತಂದು ಕೊಳ್ಳಲಿಕ್ಕೆ ಸಾಧ್ಯವಿರುತ್ತದೆಂದು ಈ ಸಂದರ್ಭದಲ್ಲಿ ನಾವು ತಿಳಿಯಬಹುದಾಗಿದೆ.

ಶರೀರದಲ್ಲಿ ವ್ಯವಾಯಿ ಗುಣವಿರುವ ದ್ರವ್ಯಗಳು ಉಂಟುಮಾಡುವ ಪರಿಣಾಮವು ಶರೀರದ ಎಲ್ಲಾ ಭಾಗಗಳಲ್ಲಿಯೂ ಏಕಕಾಲದಲ್ಲಿ ಉಂಟಾಗುತ್ತದೆ. ಆದರೆ ಇತರ ದ್ರವ್ಯಗಳಿಂದ ಇದು ಸಾಧ್ಯವಿರುವುದಿಲ್ಲ. ಉದಾಹರಣೆಗೆ ಪಾಶ್ಚಾತ್ಯರು ಉಪಯೋಗಿಸುವ ಕ್ವಿನೈನ್ ಎಂಬ ದ್ರವ್ಯದ ವಿಮರ್ಶೆಯನ್ನು ಇಲ್ಲಿ ನಾವು ಮಾಡಬಹುದು. ಕ್ವಿನೈನಿಗೆ ವ್ಯವಾಯಿಗುಣವಿಲ್ಲ. ಆದ್ದರಿಂದ ಅದು ಏಕಕಾಲದಲ್ಲಿ ಶರೀರದ ಎಲ್ಲಾಭಾಗಗಳಲ್ಲಿಯೂ ಕೆಲಸಮಾಡಲಾರದು. ಕ್ವಿನೈನು ರಕ್ತದಲ್ಲಿನ ಒಂದು ವಿಧದ ಮಲೇರಿಯಾ ಎಂಬ ಜ್ವರದ ಕ್ರಿಮಿಗೆ ಶತ್ರುವೆಂದು ಪಾಶ್ಚಾತ್ಯರ ಸಿದ್ಧಾಂತವಿದೆ. ಈ ಕ್ವಿನೈನು ವ್ಯವಾಯಿಗುಣವಿಹೀನವಾಗಿರುವುದರಿಂದ ಏಕಕಾಲದಲ್ಲಿ ಈ ಪಾಶ್ಚಾತ್ಯರ ಕ್ರಿಮಿಗಳನ್ನು ಸರ್ವಶರೀರದಲ್ಲಿಯೂ ನಾಶಮಾಡಲಾರದು ಎಂಬುದನ್ನು ಸುಲಭವಾಗಿ ತರ್ಕಸಹುದಾಗಿದೆ. ಆದುದರಿಂದಲೇ ಪಾಶ್ಚಾತ್ಯರ ದೃಷ್ಟಿಕೋಣದಿಂದ ಉಪಯೋಗಿಸಲ್ಪಡುವ ಈ ಕ್ವಿನೈನ್‌ನಿಂದ ಅವರ ಮಲೇರಿಯಾ ಜ್ವರವು ಹೋದಂತೆ ಕಂಡು ಬಂದರೂ ಪುನಃ ಪುನಃ ಮರುಕಳಿಸುವುದು ಸರ್ವವಿದಿತವಾಗಿದೆ. ಏಕೆಂದರೆ ಸ್ಥಾನದಿಂದ ಸ್ಥಾನಕ್ಕೆ ಕ್ವಿನೈನು ಹೋಗುತ್ತಿರುವಾಗ ಶರೀರದಲ್ಲಿ ಮತ್ತು ಬೇರೆ ಸ್ಥಾನಗಳಲ್ಲಿ ಕ್ರಿಮಿಗಳು ಹುಟ್ಟುತ್ತಲೇ ಇರುತ್ತವಲ್ಲದೆ ಈ ಕ್ವಿನೈನನ್ನು ಆಯುರ್ವೈದಿಕ ಸಂಸ್ಕಾರ ಹೀನವಾಗಿಯೂ, ಪಾಕಹೊಂದುವುದಕ್ಕೆ ಮುಂಚಿತವಾಗಿಯೂ, ಶರೀರದ ಮಧ್ಯಮ ಬಾಹ್ಯಮಾರ್ಗಗಳಲ್ಲಿ ಪೊಳ್ಳು ಸೂಜಿಗಳ ಯಾ ಇತರ ಸಾಧನಗಳ ಮೂಲಕ ಸೇರಿಸುವುದರಿಂದ, ಅದು ಶಲ್ಯವಾಗಿ ಪರಿಣಮಿಸಿ ಜನರಲ್ಲಿ ಕಿವುಡು ಮುಂತಾದ ರೋಗಗಳು ತಲೆದೋರುವುದು ನಮಗೆಲ್ಲರಿಗೂ ಅನುಭವ ವೇದ್ಯವಾಗಿರುತ್ತವೆ.

ಉಪಸಂಹಾರ:— ಮೇಲಿನ ಕಾರಣಗಳಿಂದ ಇಂಜಕ್ಷನ್ ಚಿಕಿತ್ಸಾಕ್ರಮವು ಆಯುರ್ವೇದ ಚಿಕಿತ್ಸಾಕ್ರಮಕ್ಕನುಸಾರವಾಗಿರುವುದಿಲ್ಲ. ಇಂಜಕ್ಷನ್ ಪದ್ಧತಿಯ ಬದಲು, ನಮ್ಮ ಆಯುರ್ವೇದಾಗಮಗಳಲ್ಲಿ ಹೇಳಿರುವ ಸದ್ಯಹಾಫಲಕಾರಿಗಳಾದ ವ್ಯವಾಯಿಗುಣಭೂಯಿಷ್ಠದ್ರವ್ಯಗಳ ಉಪಯೋಗ, ಧೂಮಪಾನಾದಿ ಕರ್ಮಗಳು ಇತ್ಯಾದಿಗಳನ್ನು ಆಯುರ್ವೇದಜ್ಞರು ವಿಶೇಷವಾಗಿ ಬಳಕೆಗೆ ತರುವುದುಚಿತವಾಗಿರುತ್ತದೆ.

ನಿಮ್ಮ ಪ್ರಶ್ನೆಗೆ ನಮ್ಮ ಅನುಭವ.

ಸುಲಭ ಔಷಧಗಳು

ಲಕ್ಷ್ಮಣ ಶೇಟ್, ಮಂಗಳೂರು.

ಪ್ರಶ್ನೆ:- ನನ್ನ ಪ್ರಾಯ ೩೩. ನನಗೆ ಪ್ರತಿ ದಿವಸ ರಾತ್ರೆ, ಹಗಲು ಸೇರಿ ೩೦-೪೦ ಸಲ ಮೂತ್ರಹೋಗುತ್ತದೆ. ಬಾಯಾರಿಕೆ ಬಹಳ. ಹಿಂದೆ ಶಕ್ತಿ ಹೆಚ್ಚು ಕಮ್ಮಿ ಇದೆ. ಇಂಜೆಕ್ಷನ್, ಪೇಟೆಂಟ್ ಔಷಧಗಳನ್ನು ತೆಗೆದುಕೊಂಡು ಸಾಕಾಯಿತು. ಯಾವುದರಲ್ಲಿಯೂ ಫಲ ಸಿಕ್ಕಿಲ್ಲ. ಈವರೆಗೆ ನಿಮ್ಮ ಅನುಭವ ತಿಳಿಸುವಿರಾ?

ಉತ್ತರ:- ನಿಮ್ಮ ಕಾಯಿಲೆಯು ಸುಲಭ ಔಷಧದಿಂದ ಗುಣವಾಗಲಾರದು. ಆದರೆ ಉಪಶಮನವಾದೀತು. ಶಕ್ತಿ ವೃದ್ಧಿಯ ಗುಣ ಬರಿಸುವುದಕ್ಕಾದರೆ ಯೋಗ್ಯ ಕಂಪೆನಿಯ "ವಸಂತ ಕುಸುಮಾಕರ ರಸ" ಉಪಯೋಗಿಸಿರಿ. ಶೀಘ್ರ ಉಪಶಮನ ಸಿಗಬೇಕಾದರೆ, ಖದಿರ, ಪಕಸ್ಯಾಕನ ಬೇರಿನ ಸಿಪ್ಪೆ, ಲಾವಂಚ, ಇವುಗಳ ಕಷಾಯವನ್ನು ಬಾಯಾರಿಕೆ ಆದ ಹಾಗೆಲ್ಲಾ ನೀರಿನ ಬದಲಿಗೆ ಉಪಯೋಗಿಸಿರಿ. ಔಷಧರೂಪವಾಗಿ ಖದಿರ, ಪಕಸ್ಯಾಕ, ನೇರಳೆ ಬೀಜದ ತಿರುಳು, ಬೆಲ್ಲ ಬೀಜ, ಪಾಷಾಣ ಭೇದಿ, ಲೋಧ್ರ ಕತ್ತೆ, ಕಿಸ್ಮರ ಬೇರಿನ ಸಿಪ್ಪೆ, ಅರ್ಸಿನ, ನೆಲ್ಲಿಕ್ಕಾ ಸಿಪ್ಪೆ, ಲಾವಂಚ, ಇವು ಕಾಲು ಪಾವು ಅರ್ಧ ತೊಲ ಪ್ರಕಾರ ಕುಟ್ಟಿ ಪುಡಿ ಮಾಡಿ ೬ ಕುಡ್ತೆ ನೀರು ಬತ್ತಿಸಿ ಒಂದೂವರೆ ಕುಡ್ತೆಗಿಳಿಸಿ ಗಾಳಿಸಿ ದಿವಸಕ್ಕೆ ೩ ಸಲ ಅರ್ಧ ಕುಡ್ತೆಯಂತೆ ೨ ಯಾ ೩ ಬಿಂದು ಜೇನು ತುಪ್ಪ ಸೇರಿಸಿ ಕುಡಿಯಬೇಕು.

ರತ್ನಾಬಾ, ಕಾರ್ಕಳ.

ಪ್ರಶ್ನೆ:- ನನ್ನ ಎರಡು ವರ್ಷದ ಹೆಣ್ಣು ಮಗು ಲಿವರ್ ಕಂಪ್ಲೈಂಟ್‌ನಿಂದ ಕಷ್ಟಪಡುತ್ತ ಡಾಕ್ಟರರು ಅಸಾಧ್ಯವೆಂತ ಕೈಬಿಟ್ಟಿದ್ದಾರೆ. ಸರ್ವಾಂಗಗಳಲ್ಲಿಯೂ ನೀರು ತುಂಬಿರುವುದು. ಕೆಲವು ದಿವಸ ತೆಗೆಯುವುದು ಕಷ್ಟವೆಂದು ಅಭಿಪ್ರಾಯ ಪಡುತ್ತಿರುವರು. ೦-೧-೬ ಸ್ಟಾಂಪು ಕಳುಹಿಸುವೆನು. ದಯೆವಿಟ್ಟು ಕೂಡಲೇ ಔಷಧಿಯನ್ನು ತಿಳಿಸಿ ಉಪಕರಿಸುವಿರಾ?

ಉತ್ತರ:- ಈ ಕೆಳಗಿನ ಕಷಾಯ ಮಾಡಿ ಕೊಟ್ಟು ೬ ದಿವಸಗಳಲ್ಲಿ ೧೦ಕ್ಕೆ ೫ ಗುಣ ಕಂಡರೆ ೨ನೇ ಕಲಂ ಔಷಧವನ್ನೂ ಮಾಡಿರಿ. ಇದರಿಂದ ಖಂಡಿತವಾಗಿಯೂ ಗುಣ ಸಿಗುವುದು. ೬ ದಿವಸದ ಕಷಾಯದಿಂದ ಅರ್ಧಕ್ಕರ್ಧ ಗುಣ ಕಾಣದಿದ್ದರೆ ಅದು ಅಸಾಧ್ಯವೆಂದು ತಿಳಿಯತಕ್ಕದ್ದು.

ಕಷಾಯ ಕ್ರಮ:- ಜಾತಿ ಕಾಟು ಪಡುವಲ, ಸಹಮೂಲ, ಬೈಲುಚುಳ್ಳಿ ಬೇರು, ಪರ್ಪಾಟಕ, ಅಮೃತ ಬಳ್ಳಿ, ನೆಗ್ಗಿನ ಮುಳ್ಳು, ಕೊತ್ತಂಬ್ರಿ ಇವು ಪ್ರತಿಯೊಂದು ೧/೮ ತೊಲದಂತೆ, ಸೋನಾಮುಖಿ ೧/೧೬ನೇ ತೊಲ, ಕಟುಕರೋಹಿಣಿ ೧/೩೨ ತೊಲ ಇವುಗಳನ್ನು ಕುಟ್ಟಿ ಪುಡಿ ಮಾಡಿ ೪॥ ಕುಡ್ತೆ ನೀರಿಗೆ ಹಾಕಿ ಬತ್ತಿಸಿ ನಾಲ್ಕನೇಯ ಒಂದಂಶಕ್ಕೆ ಇಳಿಸಿ ಗಾಳಿಸಿ ೩ ಪಾಲು ಮಾಡಿ ದಿವಸಕ್ಕೆ ೩ ಸಲ ೩ ಬಿಂದು ಪ್ರಕಾರ ಜೇನು ತುಪ್ಪ ಸೇರಿಸಿ ಕೊಡುವ್ರದು. ಈ ರೀತಿ ಪ್ರತೀ ದಿವಸ ಕಷಾಯ ಮಾಡಿ ಕೊಡುವುದು. ಹಿಂದೆ ಹೇಳಿದಂತೆ ಅರ್ಧಕ್ಕರ್ಧ ಗುಣ ಕಂಡಲ್ಲಿ ೮ನೇ ದಿವಸದಿಂದ ೧೪ನೇ ದಿವಸದ ವರೇಗೆ ಕೆಳಗಿನ ಸಾಮಾನುಗಳನ್ನು ಮೊಲೆ ಹಾಲಿನಲ್ಲಿ ಸುತ್ತು ಪ್ರಕಾರ ತೇದು ಪ್ರತೀ ದಿವಸ ಬೆಳಿಗ್ಗೆ ಮಾತ್ರ ನೆಕ್ಕಿಸುವುದು,

ಶುದ್ಧ ಪುತ್ಥಳಿ ಬಂಗಾರ, ಜಾತಿ ಹವಳ, ರುದ್ರಾಕ್ಷ ಇವುಗಳನ್ನು. ಐದೈದು ಸುತ್ತುಗಳಂತೆಯೂ ಶುದ್ಧ ಬೆಳ್ಳಿ, ಬಜೆ, ಈಶ್ವರೀ ಬೇರು, ಕಟುಕರೋಹಿಣಿ, ಜ್ಯೇಷ್ಠಮಧುಗಳನ್ನು ಮೂರು ಮೂರು ಸುತ್ತುಗಳಂತೆಯೂ ಬಾಲಹರಡೆ, ಕಿರಾತಕಡ್ಡಿ, ಒಂದೊಂದು ಸುತ್ತಿನಂತೆಯೂ, ವ್ಯಾಕ್ಯಾ೨ ಸುತ್ತಿನಂತೆಯೂ ಮೇಲೆ ಹೇಳಿದಂತೆ ಕೊಡಬೇಕು. ನಂತರ ಎಲ್ಲಾ ವಿಷಯಗಳನ್ನು ಬರೆಯಿರಿ.

ಮಂಜುನಾಥ ಕುಂದಾಪುರ.

ಪ್ರಶ್ನೆ:- ನಮ್ಮ ಪೈಕಿ ಒಂದು ಜನಕ್ಕೆ ೩೩ ವರ್ಷ ಪ್ರಾಯ. ಸ್ತ್ರೀಸುಖದಲ್ಲಿ ಸ್ವಲ್ಪವೂ ಇಷ್ಟವಿಲ್ಲ. ದೇಹದಲ್ಲಿ ನಿತ್ರಾಣ ಇತರ ಕಾಯಿಲೆಗಳೇನೂ ಇಲ್ಲ. ಇದಕ್ಕೆ ಗಾಂಜಾ ವಗೈರೆ ಸೇರದೆ ಇದ್ದ ಒಳ್ಳೇ ಪ್ರಯೋಗ ಇದ್ದರೆ ತಿಳಿಸುವಿರಾ?

ಉತ್ತರ: ಅಗ್ನಿಮಾಂದ್ಯ, ಮಲಬದ್ಧತೆ ಇದ್ದರೆ ಅದನ್ನು ಪ್ರಥಮತಃ ನಿವಾರಿಸಿ ನಂತರ ಕೊಳವಳಿಕೆ ಬೀಜ, ನೆಗ್ಗಿನ ಮುಳ್ಳು, ನ್ಯಾಸೊಳಂಗಿ ಬೀಜ (ಇವನ್ನು ತುಪ್ಪದಲ್ಲಿ ಹುರಿದು ಸಿಪ್ಪೆ ಬಿಸಾಡಬೇಕು) ನೆಲತಾಳಿಗೆಡ್ಡೆ, ಸಪೇದಮುಸ್ಲಿ, ಬೂರುಗದ ಮೇಣ, ಸಾಲಾಮಿಶ್ರಿ, ಇವು ಪ್ರತಿಯೊಂದು ಸಮತೂಕ ಹಾಕಿ ಚೂರ್ಣ ಮಾಡಿ ೧ ಯಾ ೨ ತೊಲ ಚೂರ್ಣವನ್ನು ೪ ಕುಡ್ತೆ ನೀರಿಗೆ ಹಾಕಿ ಕಷಾಯ ಮಾಡಿ ೧ ಕುಡ್ತೆಗೆ ಇಳ್ಸಿ ಗಾಳಿಸಿ ಇದಕ್ಕೆ ೧ ಕುಡ್ತೆ ದನದ ಹಾಲು ಸೇರಿಸಿ ಪುನಃ ಕುದಿಸಿ ಒಂದು ಕುಡ್ತೆಗೆ ನಿಲ್ಲಿಸಿ ಸ್ವಲ್ಪ ಸಕ್ಕರೆ ಮತ್ತು ಜ್ಯಾಕ್ಯಾ, ಪತ್ರೆ, ಏಲಕ್ಕಿ, ಕುಂಕುಮ ಕೇಶರಿ ಇವುಗಳನ್ನು ಒಟ್ಟಿಗೆ ಸೇರಿಸಿ ಮಾಡಿದ ಪುಡಿ ೧ ಚಿಟಿಕೆ. (6 ಗುಂಜಿ) ಸೇರಿಸಿ ರಾತ್ರೆ ಭೋಜನದ ಅರ್ಧ ಗಂಟೆ ನಂತರ ಕುಡಿಯುವುದು. ಹೀಗೆ ಕೆಲವು ದಿವಸ ಉಪಯೋಗಿಸಿದರೆ ಆತನ ಜನ್ಮ ಸಾರ್ಥಕವಾದ ಸ್ತ್ರೀಸುಖವು ಖಂಡಿತ ಲಭಿಸುವುದು. ಇದರಲ್ಲಿ ಸಂದೇಹವಿಲ್ಲ. ನಂತರ ನಮ್ಮ ನವಂಬರ ತಿಂಗಳ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿದ "ಶತಾವರಿ ಪಾಕ" ಕೊಡುವುದು.

ವಿರೂಪಾಕ್ಷಯ್ಯ ಬಳ್ಳಾರಿ.

ನಮ್ಮ ಜನಕ್ಕೊಂದು ೩೭ ವರ್ಷ ಪ್ರಾಯ. ಮುಟ್ಟು ನಿಂತು ಕೆಲವು ಸಮಯವಾಯಿತು. ಖಂಡಿತ ಗರ್ಭಿಣಿಯಲ್ಲ. ಬರೆಯಲು ಅನೇಕ ವಿಷಯ

ಗಳಲ್ಲಿ ತುಂಬಾ ಉಪದ್ರವಗಳಿವೆ. [illegible] ಬರುದೆ? ಎಂಬ ಸಂಶಯವಾಗುತ್ತಿದೆ. [illegible] ದರಾದೀತೆಂಬ ಆಶೆ. ಈ ಬಗ್ಗೆ ಅನೇಕ ಔಷಧಗಳನ್ನು ಮಾಡಿದರೂ ಫಲ ದೊರೆತಿಲ್ಲ. ಯೋಗ್ಯ ಪ್ರಯೋಗ ತಿಳಿಸುವಿರಾ?

ಉತ್ತರ:- [illegible] ಸೇವಿಸಿ ೧ ತಿಂಗಳು ಸೇವಿಸಿದರೆ [illegible] ಯಾಗುತ್ತದೆ.

ಪ್ರಶ್ನೆ:- ಇನ್ನೊಂದು ಜನಕ್ಕೆ ಪಿತ್ತದ [illegible] ಔಷಧ ಮಾಡಿದರೂ ಗುಣವಿಲ್ಲ. [illegible] ಅಸಾಧ್ಯ. ತಕ್ಕಂತೆ ಗುಣಕಾರಿಯಾದ ಔಷಧವಿದ್ದರೆ ತಿಳಿಸುವಿರಾ?

ಉತ್ತರ:- ಇದಕ್ಕೆ ಸುಲಭ ಔಷಧ ತೋರುವುದಿಲ್ಲ. [illegible] ಕಂಪೆನಿಯ ಸುವರ್ಣಯುಕ್ತ ಸೂತಶೇಖರ ರಸ ತಕ್ರ ಅನುಪಾನದಲ್ಲಿ ಕೊಟ್ಟರೆ ತಕ್ಷಣ ಗುಣ ದೊರೆತ ತುಂಬಾ ದಾಖಲೆಗಳಿವೆ. [illegible]

ಪ್ರಶ್ನೆ:- ೩೭ ವರ್ಷ ಪ್ರಾಯ. ಕ್ಷಯರೋಗದಲ್ಲಿ [illegible] ವಾಗಿದೆ. ಆ ಸಂಬಂಧಪಟ್ಟ ಜ್ವರ, ಕೆಮ್ಮು, ಶ್ವಾಸ [illegible] ಇವೆ. ಇದಕ್ಕೆ ಸುಲಭ ಔಷಧಿ ಇದೆಯೇ?

ಉತ್ತರ:- ರೋಗಿಯ ಮಲವು ನೀರಲ್ಲಿ ತೇಲುವುದೇ? ಮುಳುಗುವುದೆಂದು ನೋಡಿ ಬರೆಯಿರಿ. ತೇಲುವುದಾದರೆ ಸಾಧ್ಯವೆಂತಲೂ, ಮುಳುಗುವುದಾದರೆ ಅಸಾಧ್ಯವೆಂತಲೂ ತಿಳಿದು, ಸಾಧ್ಯತೆ ಕಂಡು ಬಂದಲ್ಲಿ [illegible] ಪ್ರವಾಳ ಭಸ್ಮ, ಸುವರ್ಣಮಾಲಿನಿ ವಸಂತ, ಶೃಂಗಭಸ್ಮ ಇವುಗಳ ಮಿಶ್ರಣದಿಂದ ಗುಣಪಡಿಸಬಹುದು. ವಿನಹ ಸುಲಭ ಔಷಧ ಇದಕ್ಕೆ [illegible].

[illegible] ಬಗ್ಗೆ ಟಪ್ಪಾಲು ದ್ವಾರಾ ಪ್ರಶ್ನೆಗಳಿಗೆ ಉತ್ತರಗಳನ್ನು ಅಪೇಕ್ಷಿಸುವವರು
೦--೧--೬ ಅಣೆ ಸ್ಟ್ಯಾಂಪು [illegible]

ADVERTISEMENT TARIFF (Per Insertion)

Particulars	Full Page	Half Page	Qtr. Page
1st cover page	35-0-0	—	—
2nd & 3rd cover-pages each	20-0-0	12-0-0	6-8-0
4th cover page	25-0-0	15-0-0	8-0-0
Pages containing reading matter	15-0-0	8-0-0	4-0-0
Other pages	12-0-0	6-8-0	3-8-0

Remember! An Advertisement in "Ayurveda" is as good as an introduction to every Ayurvedic physician in Karnataka.

For full particulars apply to:-

SANCHALAK "**AYURVEDA**"
KANNADA MONTHLY
UDIPI, S. INDIA.

ಜಾಹೀರಾತು ದರಗಳು. (ಒಂದು ಸರ್ತಿಗೆ)

ವಿವರ	ಇಡೀ ಪುಟ	ಅರ್ಧ ಪುಟ	ಕಾಲುಪುಟ
ರಕ್ಷಾಪತ್ರದ ಮೊದಲನೇ ಪುಟ —	೩೫-೦-೦	—	—
" ದ್ವಿತೀಯ ಮತ್ತು ತೃತೀಯ ಪುಟ	೨೦-೦-೦	೧೨-೦-೦	೬-೮-೦
" ಚತುರ್ಥ ಪುಟ	೨೫-೦-೦	೧೫-೦-೦	೮-೦-೦
ಓದುವ ಪುಟಗಳಲ್ಲಿ	೧೫-೦-೦	೮-೦-೦	೪-೦-೦
ಇತರ ಪುಟಗಳು	೧೨-೦-೦	೬-೮-೦	೩-೮-೦

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಸಂಚಾಲಕ, "ಆಯುರ್ವೇದ"
ಕನ್ನಡ ಮಾಸಪತ್ರಿಕೆ, ಉಡುಪಿ, ದ. ಹಿಂದುಸ್ಥಾನ್.

Regd. No. M. 276 MAR. 1949. Kannada Monthly

Printed by:- P. R. Bhat at Shri Radhakantha Press, Mulki, S. K.
Edited & Published by:- K. R. Puranik, at Udipi.